

ಕೆಲಸ

ಮತ್ತು ಅದರ ಮೂಲ ವಿನ್ಯಾಸ

ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ
ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವುದಕ್ಕೂ
ಅದರಲ್ಲಿ ಇಟ್ಟನು. (ಆದಿಕಾಂಡ 2:15)

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2025

ಸಂಪರ್ಕ ಮಾಹಿತಿ
All Peoples Church & World Outreach,
319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ಸೂಚಿಸಿದ ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು-ಜೆ.ವಿ-ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ (BSI) ಅನುಮತಿಯಿಂದ ಬಳಸಲಾಗಿದೆ.

ಉಚಿತ ವಿತರಣೆಗಾಗಿ
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ "ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ" ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್ಸೈಟ್ಗಳು
ಪ್ರಸಂಗಗಳು: apcwo.org/sermons | **ಪುಸ್ತಕಗಳು:** apcwo.org/books
ಚರ್ಚ್ ಆಪ್: apcwo.org/app | **ಸತ್ಯವೇದ ಕಾಲೇಜು:** apcbiblecollege.org
ಇ-ಕಲಿಕೆ: apcbiblecollege.org/elearn | **ಸಲಹಾ ಸೇವೆ:** chrysalislife.org
ಸಂಗೀತ: apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
ಏಪಿಸಿ ಪ್ರಪಂಚ ಸೇವೆಗಳು: apcworldmissions.org

(Kannada—Work—Its Original Design)

ಕೆಲಸ
ಮತ್ತು ಅದರ ಮೂಲ ವಿನ್ಯಾಸ

ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ
ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವುದಕ್ಕೂ
ಅದರಲ್ಲಿ ಇಟ್ಟನು. (ಆದಿಕಾಂಡ 2:15)

ಪರಿವಿಡಿ

1. ಪರಿಪೂರ್ಣವಾದ ಲೋಕದಲ್ಲಿ ಕೆಲಸ ಮಾಡುವುದು 1

2. ಕೆಲಸದ ಸ್ಥಳ—ಬೀಳ್ವಿಕೆಯ ಪ್ರಭಾವ ಮತ್ತು ಶಿಲುಬೆಯ ಪರಿಣಾಮ 7

3. ಪರಿಪೂರ್ಣವಲ್ಲದ ಲೋಕದಲ್ಲಿ ಕೆಲಸ ಮಾಡುವುದು 17

1
ಪರಿಪೂರ್ಣವಾದ ಲೋಕದಲ್ಲಿ ಕೆಲಸ ಮಾಡುವುದು

ಆದಿಕಾಂಡ ಪುಸ್ತಕದ ಮೊದಲ ಮೂರು ಅಧ್ಯಾಯಗಳು ದೇವರು ಭೂಮಿಯ ಮೇಲೆ ಸೃಷ್ಟಿಸಿದ್ದನ್ನು ಮತ್ತು ಕಾರ್ಯಗಳನ್ನು ಕ್ರಮಪಡಿಸಿದ್ದನ್ನು ವಿವರಿಸುತ್ತವೆ. ಇದಲ್ಲದೆ ನಾವು ಮಾನವನ ಉದ್ದೇಶ ಮತ್ತು ಸೃಷ್ಟಿ ಹಾಗೂ ದೇವರು ನಮಗೆ ಕೊಟ್ಟಿರುವ ಆಜ್ಞೆಯನ್ನು ನೋಡುತ್ತೇವೆ. "ಕೆಲಸದ" ವಿಷಯವಾಗಿ ನಾವು ಮಾಡಬೇಕಾಗಿರುವ ಕೆಲವು ವೀಕ್ಷಣೆಗಳು ಹೀಗಿವೆ.

ನಾವು ಕ್ರಿಯಾತ್ಮಕರಾಗಿರಲು ರೂಪಿಸಲ್ಪಟ್ಟಿದ್ದೇವೆ

ನಾವು ದೇವರ ಸ್ವರೂಪದಲ್ಲಿ ಆತನ ಹೋಲಿಕೆಗೆ ಸರಿಯಾಗಿ ಸೃಷ್ಟಿಸಲ್ಪಟ್ಟಿದ್ದೇವೆ. ನಮ್ಮನ್ನು ತನ್ನ ಸಾರೂಪ್ಯದಲ್ಲಿ ತನ್ನ ಹೋಲಿಕೆಗೆ ಸರಿಯಾಗಿ ಉಂಟುಮಾಡಿರುವದರಲ್ಲಿ ದೇವರ ಉದ್ದೇಶ ಏನೆಂದರೆ ನಮ್ಮ ಮೂಲಕ ಆತನು ಭೂಮಿಯ ಮೇಲೆ ಪುನರ್ ನಿರ್ಮಾಣವಾಗಬೇಕು, ಪ್ರತಿನಿಧಿಸಲ್ಪಡಬೇಕು ಮತ್ತು ಬಿಡುಗಡೆಯಾಗಬೇಕು. ದೇವರ ಗುಣಲಕ್ಷಣಗಳಲ್ಲಿ ಒಂದು ಆತನು ಸೃಷ್ಟಿಕರ್ತನಾಗಿದ್ದಾನೆ ಆದ್ದರಿಂದ, ಆತನು ಕ್ರಿಯಾತ್ಮಕನಾಗಿದ್ದಾನೆ. ಆದ್ದರಿಂದಲೇ, ದೇವರ ಸ್ವಭಾವದ ಈ ಗುಣವನ್ನು ವ್ಯಕ್ತಪಡಿಸುವ ಸಲುವಾಗಿ ಜನರನ್ನು ನೇಮಿಸಲಾಗಿದೆ ಎಂದು ನಾವು ಹೇಳಬಹುದು. ನಾವು ಕ್ರಿಯಾತ್ಮಕ ಕತೆಯುಳ್ಳವರಾಗಿರಬೇಕೆಂದು ರೂಪಿಸಲ್ಪಟ್ಟಿದ್ದೇವೆ. ಆದಾಮ ಮತ್ತು ಹವ್ವಳಂತೆ, ಹಾಗೂ ಎಲ್ಲಾ ಮಾನವರು, ನಂಬಿಗಸ್ತರಾಗಿ, ಅಭಿವೃದ್ಧಿಯಾಗುತ್ತಾ, ವ್ಯವಸಾಯ ಮಾಡುತ್ತಾ, ಭೂಮಿಯ ಮೇಲೆ ದೊರೆತನ ಮಾಡುತ್ತಾ ಸಾಗುವಾಗ—ಭೂಮಿಯ ಮೇಲೆ ತಾವು ನೆರವೇರಿಸುವ ಕಾರ್ಯಗಳ ಮೂಲಕ ಅವರೂ ದೇವರ ಕ್ರಿಯಾತ್ಮಕ ಸಾಮರ್ಥ್ಯಗಳನ್ನು ವ್ಯಕ್ತಪಡಿಸುವವರಾಗಿದ್ದಾರೆ. ಯುಕ್ತವಾಗಿ ಅರ್ಥವಾಗುವ ಸಂಗತಿ ಏನೆಂದರೆ, ಜನರ ವಿಷಯವಾಗಿ ದೇವರ ಉದ್ದೇಶ ಏನೆಂದರೆ ಅವರು ಆತನ ಸೃಷ್ಟಿಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಆತನು ತನ್ನ ಸೃಷ್ಟಿಯಲ್ಲಿ ಇಟ್ಟಿರುವವುಗಳ ಮೂಲಕ ಅದ್ಭುತವಾದ ಕಾರ್ಯಗಳನ್ನು ಮಾಡಬೇಕು.

ನಾವು ಕೆಲಸ ಮಾಡಲು ರೂಪಿಸಲ್ಪಟ್ಟಿದ್ದೇವೆ

"ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ (ಉಳುವದಕ್ಕೂ) *ಮತ್ತು ಕಾಯುವದಕ್ಕೂ* (ನೋಡಿಕೊಳ್ಳುವದಕ್ಕೂ) *ಅದರಲ್ಲಿ ಇಟ್ಟನು"* (ಆದಿಕಾಂಡ 2:15). ದೇವರು ಆದಾಮನನ್ನು ಏದೆನ್ ತೋಟದ ಮಧ್ಯದಲ್ಲಿ ಇರಿಸಿದನು ಮತ್ತು ಅವನಿಗೆ ಕೆಲವು ಜವಾಬ್ದಾರಿಕೆಗಳನ್ನು ಕೊಟ್ಟನು. ಆದಾಮನು ತೋಟವನ್ನು ಉತ್ತು ವ್ಯವಸಾಯ ಮಾಡಬೇಕಾಗಿತ್ತು, ಇದರ ಅರ್ಥ ಅವನಿಗೆ ಮಾಡಲು ಕೆಲಸ ಇತ್ತು. ಮಾನವನ ಬೀಳ್ವಿಕೆಗೂ ಮೊದಲೇ ದೇವರು ಏದೆನ್ ತೋಟದಲ್ಲಿ ಕೆಲಸವನ್ನು ಪರಿಚಯಪಡಿಸಿದನು. ಕೆಲಸವು ದೇವರಿಂದ ಸ್ಥಾಪನೆಯಾಗಿದೆ ಆದ್ದರಿಂದ, ಕೆಲಸವು ಒಳ್ಳೆಯ ವಿಷಯವಾಗಿದೆ. ದೇವರು ಮದುವೆಯನ್ನು ಸ್ಥಾಪಿಸುವದಕ್ಕಿಂತ ಮುಂಚೆಯೇ ಕೆಲಸವನ್ನು ಸ್ಥಾಪಿಸಿದನು.

ದೇವರು ಮಾನವ ಕುಲಕ್ಕೆ ಒಪ್ಪಿಸಿರುವದನ್ನು ಅತಿಕ್ರಮಿಸಲು ಬಹಳವಾಗಿ ಆಸಕ್ತಿಯುಳ್ಳವನಾಗಿದ್ದಂತೆ ಖಂಡಿತವಾಗಿ ತೋರಿದ, ಸೈತಾನನಿಂದ ಆದಾಮನು ಏದೆನ್ ತೋಟವನ್ನು ಕಾಪಾಡಬೇಕಾಗಿತ್ತು. ಆದಾಮನು ದೇವರಿಗೆ ಅಧೀನನಾಗಿ, ತನ್ನೊಂದಿಗಿರುವ ದೇವರ ಮಹಿಮೆಯೊಂದಿಗೆ (ದೇವರ ಸಾರೂಪ್ಯ ಮತ್ತು ಹೋಲಿಕೆಯುಳ್ಳವನಾಗಿ), ಆತನ ಪ್ರಸನ್ನತೆಯಲ್ಲಿ ನಡೆದುಕೊಳ್ಳುತ್ತಾ ಇದ್ದಷ್ಟು ಸಮಯ, ಯಶಸ್ವಿಯಾಗಿ ವೈರಿಯನ್ನು ಹೊರಗಿಡಲು ಮತ್ತು ತನಗೆ ಒಪ್ಪಿಸಿಕೊಡಲಾಗಿದ್ದನ್ನು ಕಾಪಾಡಿಕೊಳ್ಳಲು ಶಕ್ತನಾಗಿದ್ದನು. ಇದಲ್ಲದೆ, ತೋಟದಲ್ಲಿ ಆದಾಮನಿಗೆ ಕೊಡಲಾದ ಜವಾಬ್ದಾರಿಕೆಯು ಆದಾಮನ ಸಂತತಿಯ ಮೂಲಕ ಭೂಲೋಕದಲ್ಲೆಲ್ಲಾ ಹರಡಿಕೊಳ್ಳಬೇಕಾಗಿತ್ತು ಎಂಬದನ್ನೂ ನಾವು ಊಹಿಸಿಕೊಳ್ಳಬಹುದು.

ಕೆಲಸದ ಸ್ಥಳದಲ್ಲಿ ಸರಿಬೀಳುವ ಸಹಕಾರಿಯಾಗಿರಲು ಹವ್ವಳು ಸೃಷ್ಟಿಸಲ್ಪಟ್ಟಳು

ಹವ್ವಳು *"ಅವನಿಗೆ ಸರಿಬೀಳುವ ಸಹಕಾರಿಯಾಗಿರಬೇಕೆಂದು"* ದೇವರು ಅವಳನ್ನು ಉಂಟುಮಾಡಿದನು (ಆದಿಕಾಂಡ 2:18). ಹವ್ವಳು ಆದಾಮನಿಗೆ ಸರಿಬೀಳುವ ಸಹಕಾರಿಯಾಗಿರಬೇಕಾಗಿದ್ದು, ಅವನನ್ನು ಒಂಟಿತನವನ್ನು ತಗ್ಗಿಸುವವಳು, ಮತ್ತು ಅದೇ ಸಮಯದಲ್ಲಿ, ಅವನಿಗೆ ತೋಟದಲ್ಲಿದ್ದ

ಜವಾಬ್ದಾರಿಕೆಗಳಲ್ಲಿ ಜೊತೆ-ಕೆಲಸದವಳು ಮತ್ತು ಜೊತೆಗಾರ್ತಿಯಾಗಿ ಕಾರ್ಯಮಾಡುವವಳಾಗಿರಬೇಕಿತ್ತು. ತೋಟದಲ್ಲಿ ವ್ಯವಸಾಯ ಮಾಡುತ್ತಾ ಅದನ್ನು ಕಾಯಬೇಕು ಎಂದು ಆದಾಮನು ದೇವರಿಗೆ ಹೊಂದಿದ ಆಜ್ಞೆಯೂ ಇದರಲ್ಲಿ ಸೇರಿತ್ತು. ಹವ್ವಳಿಗೆ ತೋಟದಲ್ಲಿ ಸ್ಥಳ ಮತ್ತು ಆದಾಮನೊಂದಿಗೆ ಅದರಲ್ಲಿ ವ್ಯವಸಾಯ ಮಾಡುವ ಮತ್ತು ಅದನ್ನು ಕಾಯುವ ಕೆಲಸವೂ ಇತ್ತು. ಮಾನವ ಕುಲದವರಿಗೆ ಕೊಡಲಾಗಿರುವ ಆದೇಶದಲ್ಲಿ ಪುರುಷನ ಜೊತೆಯಲ್ಲಿರುವದಕ್ಕಾಗಿ ಸ್ತ್ರೀಯರು ದೇವರಿಂದ ಸೃಷ್ಟಿಯಾಗಿದ್ದಾರೆ. ಕೆಲಸದ ಸ್ಥಳದಲ್ಲಿ ಸ್ತ್ರೀಯರಿಗೆ ಒಂದು ಪಾತ್ರ ಮತ್ತು ಪ್ರಭಾವದ ಸ್ಥಾನ ಇದೆ.

ಪರಿಪೂರ್ಣವಾದ ಲೋಕದಲ್ಲಿ ಕೆಲಸ ಮಾಡುವುದು

ಒಂದುವೇಳೆ ಆದಾಮ ಮತ್ತು ಹವ್ವಳು ಪಾಪ ಮಾಡದೆ ಇದ್ದಿದ್ದರೆ ಮತ್ತು ಮಾನವ ಕುಲವು ದೇವರ ಮೂಲ ಯೋಜನೆಯ ಪ್ರಕಾರವೇ ಮುಂದುವರೆದಿದ್ದರೆ ಏನಾಗುತ್ತಾ ಇತ್ತು? ತೋಟದಲ್ಲಿ ಕೆಲಸ ಮಾಡುವದು, ಮತ್ತು ಕಾಲಕ್ರಮೇಣ, ನಿರ್ದಿಷ್ಟವಾಗಿ ಕೆಲಸದ ಸಂಬಂಧದಲ್ಲಿ, ದೇವರು ಜನರಿಗಾಗಿ ಉದ್ದೇಶಿಸಿದ್ದ ಎಲ್ಲವುಗಳೊಳಗೆ ಅಭಿವೃದ್ಧಿಯಾಗಿ ಪ್ರವೇಶಿಸಿದ್ದರೆ ಹೇಗಿರುತ್ತಾ ಇತ್ತು? ಒಂದುವೇಳೆ ಮಾನವನು ಪಾಪ ಮಾಡದೆ ಇದ್ದಿದ್ದರೆ-ಪರಿಪೂರ್ಣವಾದ ಲೋಕದಲ್ಲಿ ಕೆಲಸದ ಸ್ಥಳ ಏನಾಗಿರುತ್ತಾ ಇತ್ತು?

ಸತ್ಯವೇದಾನುಸಾರವಾಗಿರುವ ದೃಷ್ಟಿಕೋನದ ಕೆಲವು ವೀಕ್ಷಣೆಗಳು ಹೀಗಿವೆ.

ಕೆಲಸದ ದಿನದ ಮೂಲಕ ಆರಾಧನೆಯು ಮುಂದುವರೆಯುತ್ತಾ ಇತ್ತು

ದೇವರ ಪ್ರಸನ್ನತೆಯು ಇಡೀ ದಿನ ನಮ್ಮನ್ನು ಆವರಿಸಿಕೊಳ್ಳುತ್ತಾ ಇತ್ತು. ದಿನವಿಡೀ ನಾವು ದೇವರೊಂದಿಗೆ ಪರಿಪೂರ್ಣವಾದ ಅನ್ಯೋನ್ಯತೆಯಲ್ಲಿ ಇರುತ್ತಾ ಇದ್ದೆವು. ಕೆಲಸ ಮತ್ತು ಆರಾಧನೆ ದಿನದ ವಿಶಿಷ್ಠ ತಾಸುಗಳಾಗಿ ವಿಭಾಗಿಸಲ್ಪಟ್ಟವುಗಳಾಗಿ ಅಥವಾ ಪ್ರತ್ಯೇಕವಾದವುಗಳಾಗಿ ಇರುತ್ತಿರಲಿಲ್ಲ.

ಆರಾಧನೆ ಮತ್ತು ಕೆಲಸ ಎರಡನ್ನೂ ದೇವರಿಗಾಗಿ ಮಾಡಬೇಕಾಗಿತ್ತು

ಕೆಲಸವು ಸಣ್ಣಪುಟ್ಟ ಕೆಲಸವಾಗಿರುತ್ತಾ ಇರಲಿಲ್ಲ ಬದಲಾಗಿ ಪರಲೋಕದ ಹುದ್ದೆ, ದೇವರು ಆದೇಶಿಸಿರುವ ಕಾರಣ ದೇವರಿಗಾಗಿ ಮಾಡುವ ಸೇವೆಯಾಗಿರುತ್ತಾ ಇತ್ತು. ಪ್ರತಿಯೊಬ್ಬರು ಕರ್ತನಿಗಾಗಿ ಕೆಲಸ ಮಾಡುವವರಾಗಿರುತ್ತಿದ್ದರು. "ನಾನು ಈಗ ಲೌಕಿಕ ಅಥವಾ ಪ್ರಾಪಂಚಿಕವಾದ ಕೆಲಸವನ್ನು ಮಾಡುತ್ತಾ

ಇದ್ದೇನೆ ಮನೆಗೆ ಹೋದ ನಂತರ, ದೇವರನ್ನು ಆರಾಧನೆ ಮಾಡುವಂಥ ಪರಿಶುದ್ಧವಾದ ಕೆಲಸವನ್ನು ಮಾಡುತ್ತೇನೆ" ಎಂಬ ಯಾವ ಭಾವನೆಯೂ ಇರುವದಿಲ್ಲ.

ದೇವರು ಸಹ ಕೆಲಸದಲ್ಲಿ ಇರುತ್ತಿದ್ದನು

ತೋಟದಲ್ಲಿ ವಿಶಿಷ್ಟವಾದ ದಿನ ಹೇಗಿರುತ್ತಾ ಇತ್ತು ಎಂಬದನ್ನು ಆದಿಕಾಂಡ 3:8 ಹೇಗೆ ಚಿತ್ರಿಸುತ್ತದೆ ಎಂದು ನೋಡುವದೇ ಆಸಕ್ತಿಕರ ಸಂಗತಿಯಾಗಿದೆ. ಅದು ಹೇಳುವದೇನೆಂದರೆ, *"ತರುವಾಯ ಯೆಹೋವ ದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆತನ ಸಪ್ಪಳವನ್ನು ಕೇಳಿ,..."* ಆದಾಮ ಮತ್ತು ಹವ್ವಳು ಜೀವನಮಾಡುತ್ತಾ ಅದನ್ನು ಉತ್ತು ವ್ಯವಸಾಯ ಮಾಡುವರೊಂದಿಗೆ ನೋಡಿಕೊಳ್ಳುತ್ತಾ ಇದ್ದಾಗ ದೇವರು ಅವರನ್ನು ಬಂದು ಭೇಟಿಮಾಡುತ್ತಿದ್ದ ಚಿತ್ರಣವನ್ನು ಇದು ಕೊಡುತ್ತದೆ. ನಿಜವಾಗಿ ಹೇಳುವದಾದರೆ ದೇವರು ಅವರನ್ನು ಭೇಟಿಮಾಡುತ್ತಿದ್ದನು ಮತ್ತು ತನ್ನ ಸೃಷ್ಟಿಯಲ್ಲಿ ಅಡಕವಾಗಿದ್ದ ರಹಸ್ಯಗಳನ್ನು ಹೇಳಿಕೊಡುತ್ತಿದ್ದನು. ತನ್ನ ಸೃಷ್ಟಿಯಲ್ಲಿ ಲಭ್ಯವಿರುವದನ್ನ ಹತೋಟಿಗೆ ತೆಗೆದುಕೊಂಡು ಹೊಸ ಕಾರ್ಯಗಳನ್ನು ಕಂಡುಹಿಡಿಯುವದು, ಹೊಸ ರೀತಿಯಲ್ಲಿ ಕಾರ್ಯಗಳನ್ನು ಮಾಡುವದು ಮತ್ತು ಇನ್ನಿತರೆ ವಿಷಯಗಳನ್ನು ಅವರಿಗೆ ತೋರಿಸುತ್ತಾ ಇದ್ದನು. ದೇವರು ಕೆಲಸ ಮಾಡುವದರಿಂದ, ದೇವರ ಸಕಾರಾತ್ಮಕ ಸಾಮರ್ಥ್ಯಗಳು ಹೊಸ ಆವಿಷ್ಕಾರಗಳು, ಸಂಶೋಧನೆಗಳು, ಮತ್ತು ಕೊನೆಯಿಲ್ಲದ ಸಾಧ್ಯತೆಗಳ ಮೂಲಕ ಜನರಿಂದ ಬಿಡುಗಡೆಗೊಳ್ಳುತ್ತಿದ್ದವು. ದೇವರ ಸೃಷ್ಟಿಯಲ್ಲಿ ನಿಯಮಗಳನ್ನು ಕಂಡುಹಿಡಿಯುವುದು ಮತ್ತು ಸಜ್ಜುಗೊಳಿಸುವುದು ರೋಮಾಂಚಕವಾಗಿರುತ್ತಾ ಇತ್ತು. ಪ್ರವಾದಿಯಾದ ಯೆಶಾಯನು ಈ ಚಿತ್ರವನ್ನು ನಮಗಾಗಿ ಬಿಡಿಸಿದ್ದಾನೆ—ಭೂಮಿಯನ್ನು ಉತ್ತು ಕೊಯ್ಲಿಗೆ ಬೇಕಾದ ಪ್ರಕ್ರಿಯೆ ನಡೆಸುವುದು ಹೇಗೆ ಎಂಬದನ್ನು ದೇವರು ರೈತನಿಗೆ ಕಲಿಸಿದ್ದಾನೆ.

ಯೆಶಾಯ 28:23-29

[23]ನನ್ನ ಧ್ವನಿಗೆ ಕಿವಿಗೊಟ್ಟು ಕೇಳಿರಿ, ನನ್ನ ಮಾತಿಗೆ ಗಮನವಿಟ್ಟು ಆಲಿಸಿರಿ;

[24]ಬಿತ್ತನೆಗಾಗಿ ಉಳುವವನು ಸದಾ ಉಳುತ್ತಿರುವನೋ? [ಪ್ರತಿನಿತ್ಯವೂ] ಮಣ್ಣನ್ನು ಕೆಳಮೇಲು ಮಾಡುತ್ತಾ ಕುಂಟೆಹೊಡೆಯುವನೋ?

[25]ಅಂತು ಭೂಮಿಯನ್ನು ಹಸನುಮಾಡಿದ ಮೇಲೆ ಕರಿಯ ಜೀರಿಗೆಯನ್ನು ಚೆಲ್ಲಿ ಜೀರಿಗೆಯನ್ನು ಬಿತ್ತಿ ಗೋದಿಯನ್ನು ಸಾಲು ಸಾಲಾಗಿಯೂ ಜವೆಗೋದಿಯನ್ನು ತಕ್ಕ ಸ್ಥಳದಲ್ಲಿಯೂ ಕಡಲೆಯನ್ನು ಅಂಚಿನಲ್ಲಿಯೂ ಹಾಕುವನಲ್ಲವೇ.

[26]ಅವನ ದೇವರು ಇದನ್ನೆಲ್ಲಾ ಅವನಿಗೆ ಸರಿಯಾಗಿ ಕಲಿಸಿ ತಿದ್ದುತ್ತಾನೆ.
[27]ಆದಕಾರಣ ಅವನು ಕರಿಯ ಜೀರಿಗೆಯನ್ನು ಒಕ್ಕುವದು ಹಲಿವೆಯಿಂದಲ್ಲ, ಕೋಲಿನಿಂದಲೇ; ಜೀರಿಗೆಯನ್ನು ಒಕ್ಕುವದು ಕಣದ ಗುಂಡಿನಿಂದಲ್ಲ, ದೊಣ್ಣೆಯಿಂದಲೇ.
[28]ಗೋದಿಯ ಕಾಳನ್ನು ನುಚ್ಚು ನುಚ್ಚು ಮಾಡುವನೋ? ತನ್ನ ಕುದುರೆಗಳನ್ನು ಹೊಡೆಯುತ್ತಾ ಗುಂಡನ್ನು ಗಿರ್ರನೆ ಉರುಳಿಸುತ್ತಾ ಯಾವಾಗಲೂ ಒಕ್ಕುತ್ತಿರುವದಿಲ್ಲ; ನುಚ್ಚು ನುಚ್ಚು ಮಾಡನು.
[29]ಈ ವಿವೇಕವು ಸಹ ಅತಿಶಯಾಲೋಚನಾಪರನೂ ಸುಜ್ಞಾನಶ್ರೇಷ್ಠನೂ ಆಗಿರುವ ಸೇನಾಧೀಶ್ವರನಾದ ಯೆಹೋವನಿಂದಲೇ ಉಂಟಾಗುತ್ತದೆ.

ದೇವರ ಜ್ಞಾನವು ಆತನ ಸೃಷ್ಟಿಯಲ್ಲೆಲ್ಲಾ ಸಮಗ್ರವಾಗಿದೆ. ಯೆರೆಮೀಯ 10:12 ನಮಗೆ ಹೇಳುವದೇನೆಂದರೆ, *"ಆತನು ತನ್ನ ಶಕ್ತಿಯಿಂದ ಭೂಮಿಯನ್ನು ನಿರ್ಮಿಸಿ ತನ್ನ ಜ್ಞಾನದಿಂದ ಲೋಕವನ್ನು ಸ್ಥಾಪಿಸಿ ತನ್ನ ವಿವೇಕದಿಂದ ಆಕಾಶಮಂಡಲವನ್ನು ಹರಡಿದ್ದಾನೆ."*

ಜ್ಞಾನವು ಮಾತನಾಡುತ್ತದೆ ಮತ್ತು ಪ್ರಕಟಿಸುತ್ತದೆ,

ಜ್ಞಾನೋಕ್ತಿಗಳು 8:22-31
[22]ಯೆಹೋವನು ತನ್ನ ಸೃಷ್ಟಿಕ್ರಮದಲ್ಲಿ ಮೊದಲು ನನ್ನನ್ನು ನಿರ್ಮಿಸಿದನು; ಆತನ ಪುರಾತನಕಾರ್ಯಗಳಲ್ಲಿ ನಾನೇ ಪ್ರಥಮ.
[23]ಪ್ರಾರಂಭದಲ್ಲಿ, ಭೂಮಿಯು ಹುಟ್ಟುವದಕ್ಕಿಂತ ಮುಂದೆ, ಅನಾದಿಕಾಲದಲ್ಲಿ ಸ್ಥಾಪಿಸಲ್ಪಟ್ಟೆನು.
[24]ಜಲನಿಧಿಗಳಾಗಲಿ ನೀರುತುಂಬಿದ ಬುಗ್ಗೆಗಳಾಗಲಿ ಇಲ್ಲದಿರುವಾಗ ನಾನು ಹುಟ್ಟಿದೆನು.
[25]ಬೆಟ್ಟಗುಡಗಳು ಬೇರೂರಿ ನಿಲ್ಲುವದಕ್ಕೆ ಮುಂಚೆ ಆತನು ಭೂಲೋಕವನ್ನಾಗಲಿ ಬೈಲನ್ನಾಗಲಿ
[26]ಭೂಮಿಯ ಮೊದಲನೆಯ ಅಣುರೇಣನ್ನಾಗಲಿ ನಿರ್ಮಿಸದೆ ಇರುವಾಗ ನಾನು ಹುಟ್ಟಿದೆನು.
[27]ಆತನು ಸಾಗರದ ಮೇಲೆ ಚಕ್ರಾಕಾರವಾದ ಗೀಟನ್ನು ಎಳೆದು ಆಕಾಶಮಂಡಲವನ್ನು ಸ್ಥಾಪಿಸುವಾಗ ಅಲ್ಲಿದ್ದೆನು.
[28]ಆತನು ಗಗನವನ್ನು ಮೇಲೆ ಸ್ಥಿರಪಡಿಸಿ ಸಾಗರದ ಸೆಲೆಗಳನ್ನು ನೆಲೆಗೊಳಿಸಿ
[29]ಪ್ರವಾಹಗಳು ತನ್ನ ಅಪ್ಪಣೆಯನ್ನು ಮೀರದ ಹಾಗೆ ಸಮುದ್ರಕ್ಕೆ ಎಲ್ಲೆಕಟ್ಟನ್ನು ನೇಮಿಸಿ ಭೂಮಿಯ ಅಸ್ತಿವಾರಗಳನ್ನು ಗೊತ್ತುಮಾಡುವಾಗ
[30]ನಾನು ಆತನ ಹತ್ತಿರ ಶಿಲ್ಪಿಯಾಗಿದ್ದುಕೊಂಡು ಪ್ರತಿದಿನವೂ ಆನಂದಿಸುತ್ತಾ ಯಾವಾಗಲೂ ಆತನ ಮುಂದೆ ವಿನೋದಿಸುತ್ತಾ
[31]ಆತನ ಭೂಲೋಕದಲ್ಲಿ ಉಲ್ಲಾಸಿಸುತ್ತಾ ಮಾನವಸಂತಾನದಲ್ಲಿ ಹರ್ಷಿಸುತ್ತಾ ಇದ್ದೆನು.

ತನ್ನ ಸೃಷ್ಟಿಯನ್ನು ಕಂಡುಹಿಡಿಯಲು ದೇವರು ತನ್ನ ಜನರಿಗೆ ಸಹಾಯ ಮಾಡಿದಾಗ, ಅವರು ದೇವರ ಜ್ಞಾನ—ದೇವರ ಮನಸ್ಸಿನ ಒಳನೋಟವನ್ನು ಸಂಪಾದಿಸಿಕೊಳ್ಳುತ್ತಿದ್ದರು.

ಫಲದಾಯಕತೆ, ಸಮೃದ್ಧಿ, ಮತ್ತು ಹೆಚ್ಚಳ ಸಾಮಾನ್ಯ ಫಲಿತಾಂಶವಾಗಿರುತ್ತಾ ಇತ್ತು

ಮಾನವನು ಏನನ್ನು ಮಾಡಲು ರೂಪಿಸಲ್ಪಟ್ಟಿದ್ದನೋ ಅದಕ್ಕಾಗಿ ದೇವರು ಅವನನ್ನು ಆಶೀರ್ವದಿಸಿದ್ದನು. ಆಶೀರ್ವಾದವು ಫಲದಾಯಕತೆ, ಸಮೃದ್ಧಿ ಮತ್ತು ಹೆಚ್ಚಳಕ್ಕೆ ಕಾರಣವಾಗಿರುತ್ತಾ ಇತ್ತು. ಕಾರ್ಯಗಳು ಬೆಳೆಯುವುದು, ಏಳಿಗೆಯಾಗುವುದು, ವೃದ್ಧಿಯಾಗುವುದು ಮತ್ತು ಅಧಿಕವಾಗುವುದನ್ನು ನೋಡುವುದು ಸಾಮಾನ್ಯವಾಗಿದೆ.

ಕೆಲಸವು ಸಂತೋಷಕರವಾಗಿರಬೇಕು, ಆಹ್ಲಾದಕರ ವಿಷಯವಾಗಿರಬೇಕು

ಪರಿಪೂರ್ಣವಾದ ಲೋಕದಲ್ಲಿ, ಕೆಲಸವು ಸಂತೋಷಕರವಾಗಿ, ಆಹ್ಲಾದಕರವಾಗಿ ಇರುತ್ತಾ ಇತ್ತು. ಪ್ರತಿದಿನದ ಅಂತ್ಯದಲ್ಲಿ, ಒಟ್ಟಾಗಿ ಬರುತ್ತಿದ್ದ ಕಾರ್ಯಗಳನ್ನು ನಾವು ಆನಂದದಿಂದ ನೋಡುತ್ತಿದ್ದೆವು ಮತ್ತು ಅವುಗಳ ವಿಷಯದಲ್ಲಿ ಖುಷಿಪಡುತ್ತಿದ್ದೆವು. ದಿನದ ಅಂತ್ಯದಲ್ಲಿ ಹತಾಶೆ ಅಥವಾ ಪ್ರಯೋಜನವಿಲ್ಲದೆ ಕಷ್ಟಪಟ್ಟಿದ್ದೇವೆ ಎಂಬ ಭಾವನೆ ಮತ್ತು ಅನಿಸಿಕೆ ಇರುತ್ತಿರಲಿಲ್ಲ. ಪ್ರತಿದಿನದ ಕೆಲಸವು ಅರ್ಥಪೂರ್ಣ, ಉದ್ದೇಶಪೂರ್ವಕ, ಮತ್ತು ಸಂತೋಷಕರವಾಗಿ ಇರುತಿತ್ತು. ಮುಂಬರುವ ಯುಗದಲ್ಲಿ ಕಾರ್ಯಗಳು ಹೇಗಿರುತ್ತವೆ ಎಂಬದರ ಬಗ್ಗೆ ಯೆಶಾಯನು ಮುಂದಾಗಿ ತಿಳಿಸಿರುವದು ಇದರ ಸುಳಿವನ್ನು ನಮಗೆ ಕೊಡುತ್ತದೆ.

ಯೆಶಾಯ 65:21-23

[21]ಅಲ್ಲಿನ ಜನರು ತಾವು ಕಟ್ಟಿದ ಮನೆಗಳಲ್ಲಿ ತಾವೇ ವಾಸಿಸುವರು, ತಾವು ಮಾಡಿದ ತೋಟಗಳ ಫಲವನ್ನು ತಾವೇ ಅನುಭವಿಸುವರು.

[22]ಒಬ್ಬನು ಕಟ್ಟಿದ ಮನೆಯಲ್ಲಿ ಬೇರೊಬ್ಬನು ವಾಸಿಸನು; ಒಬ್ಬನು ಮಾಡಿದ ತೋಟದ ಫಲವು ಇನ್ನೊಬ್ಬನಿಗೆ ವಶವಾಗದು; ನನ್ನ ಜನರ ಆಯುಸ್ಸು ವೃಕ್ಷದ ಆಯುಸ್ಸಿನಂತಿರುವದು; ನನ್ನ ಆಪ್ತರು ತಮ್ಮ ಕೈಕೆಲಸದ ಆದಾಯವನ್ನು ಪೂರಾ ಅನುಭವಿಸುವರು.

[23]ಅವರು ವ್ಯರ್ಥವಾಗಿ ದುಡಿಯರು, ಅವರಿಗೆ ಹುಟ್ಟುವ ಮಕ್ಕಳು ಘೋರ ವ್ಯಾಧಿಗೆ ಗುರಿಯಾಗರು. ಅವರು ಯೆಹೋವನ ಆಶೀರ್ವಾದವನ್ನು ಹೊಂದಿದವರ ಸಂತಾನವಷ್ಟೆ; ಅವರ ಸಂತತಿಯವರು ಅವರೊಂದಿಗೆ ಬಹುದಿನವಿರುವರು.

ಕೆಲಸದ ಸ್ಥಳದಲ್ಲಿ ವಿಪತ್ತುಗಳು, ದುರಾದೃಷ್ಟಗಳು, ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವದು, ಮತ್ತು ಆರ್ಥಿಕ ಬಿಕ್ಕಟ್ಟು ಇವುಗಳು ಇರುತ್ತಲೇ ಇರಲಿಲ್ಲ!

2

ಕೆಲಸದ ಸ್ಥಳ—ಬೀಳ್ವಿಕೆಯ ಪ್ರಭಾವ ಮತ್ತು ಶಿಲುಬೆಯ ಪರಿಣಾಮ

ಬೀಳ್ವಿಕೆಯು ಇದನ್ನು ಕಷ್ಟಕರವಾನ್ನಾಗಿ ಮಾಡಿತು

ಬೀಳ್ವಿಕೆಯು ಕೆಲಸದ ಸ್ಥಳದ ಮೇಲೆ ತನ್ನ ಪ್ರಭಾವವನ್ನು ಬೀರಿತು. ದೇವರು ಫಲಿತಾಂಶವನ್ನು ಪ್ರಕಟಿಸಿದನು.

ಆದಿಕಾಂಡ 3:17-19

17“ . . . ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು.

18ಆ ಭೂಮಿಯಲ್ಲಿ ಮುಳ್ಳುಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ.

19ನೀನು ತಿರಿಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನಃ ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೆಳಿದನು.”

ಕೆಲಸದ ಸ್ಥಳವು ಶಾಪಕ್ಕೆ ಒಳಗಾಯಿತು. ಫಲವನ್ನು ಅನುಭವಿಸಬೇಕಾದರೆ ಬೆವರು ಸುರಿಸಬೇಕು, ದುಡಿದು ದುಡಿದು, ಕಷ್ಟಪಡಬೇಕು. ಒಬ್ಬನ ಜೀವಮಾನವೆಲ್ಲಾ ಇದು ಸಾಗುತ್ತಲೇ ಇರುವುದು. ಕೆಲಸದ ಸ್ಥಳದಲ್ಲಿ ವಿರೋಧಿಸುವ, ಅಡ್ಡಿಪಡಿಸುವ, ಮತ್ತು ನೋವನ್ನುಂಟು ಮಾಡುವ (ಮುಳ್ಳುಗಳು ಮತ್ತು ಕಳೆಗಳು) ಕಾರ್ಯಗಳು ಇರುವವು. ಕೆಲಸದ ಸ್ಥಳದಲ್ಲಿ ಇವುಗಳು ಯಾವುವು ಸಹ ದೇವರ ಮೂಲ ಉದ್ದೇಶದ ಭಾಗವಾಗಿರಲಿಲ್ಲ.

ಶಿಲುಬೆಯು ಬೀಳ್ವಿಕೆಯ ಕಾರ್ಯಗಳನ್ನು ಬುಡಮೇಲು ಮಾಡಿತು

ಕರ್ತನಾದ ಯೇಸು ಕ್ರಿಸ್ತನು ನಮ್ಮನ್ನು ಬೀಳ್ವಿಕೆಯ ಸಂಪೂರ್ಣತೆಯಿಂದ ಬಿಡಿಸಲು ಬಂದನು. ಬೀಳ್ವಿಕೆಯ ನಿಮಿತ್ತ ಮಾನವ ಕುಲದ ಮೇಲೆ ಬಂದ ಎಲ್ಲವುಗಳು ಕರ್ತನಾದ ಯೇಸು ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಮತ್ತು

ಪುನರುತ್ಥಾನದ ಶಿಲುಬೆಯ ಮೇಲಿನ ವಿಮೋಚನೆಯ ಕಾರ್ಯದ ಮೂಲಕ ಎಲ್ಲವೂ ಬುಡಮೇಲಾದವು. ಕೆಲಸದ ಸ್ಥಳದ ಮೇಲೆ ಬೀಳ್ಚಿಕೆಯಿಂದಾದ ಪರಿಣಾಮವೂ ಇದರಲ್ಲಿ ಸೇರಿದೆ. ಸತ್ಯವೇದವು ನಮಗೆ ಕಲಿಸುವದೇನೆಂದರೆ ದೇವರು ಯೇಸು ಕ್ರಿಸ್ತನ ಮೂಲಕ, *"ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ...ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆಮಾಡಿದನು"* (ಕೊಲೊಸ್ಸೆಯವರಿಗೆ 1:20). ಶಿಲುಬೆಯು ಕೆಲಸದ ಸ್ಥಳವೂ ಸೇರಿ ಬೀಳ್ಚಿಕೆಯ ಪ್ರಭಾವಕ್ಕೆ ಒಳಗಾದ "ಸಮಸ್ತವನ್ನು" ಬಿಡಿಸುತ್ತದೆ ಮತ್ತು ಸಮಾಧಾನಪಡಿಸುತ್ತದೆ. ನಾವು ಬೀಳ್ಚಿಕೆಯಿಂದ ಬಿಡುಗಡೆಯನ್ನು ಹೊಂದಿದ್ದೇವೆ. ನಮ್ಮ ಬಿಡುಗಡೆಯ ಆ ಭಾಗವು ವರ್ತಮಾನ ಕಾಲದ ವಾಸ್ತವವಾಗಿದೆ (ಗಲಾತ್ಯದವರಿಗೆ 1:4; ಎಫೆಸದವರಿಗೆ 1:7) ಮತ್ತು ನಮ್ಮ ಬಿಡುಗಡೆಯ ಒಂದು ಭಾಗವು ಇನ್ನೂ ಭವಿಷ್ಯದಲ್ಲಿದೆ ಎಂಬದನ್ನು ಅರ್ಥಮಾಡಿಕೊಳ್ಳುವವರಾಗಿದ್ದೇವೆ. ನಮ್ಮ ವಿಮೋಚನೆಯ ಪರಿಪೂರ್ಣತೆಯನ್ನು ನಾವು ಇನ್ನೂ ಅನುಭವಿಸಬೇಕಾಗಿದೆ (ಎಫೆಸದವರಿಗೆ 1:14). ಇದಲ್ಲದೆ ಸೃಷ್ಟಿಯು ಸಹ ದೇವಪುತ್ರರ (ಮಕ್ಕಳ) ಪ್ರಕಟನೆ ಮತ್ತು ಬೀಳ್ಚಿಕೆಯ ನಿಮಿತ್ತ ಅದು ಒಳಗಾಗಿರುವ ಭಷ್ಟ್ರತನದಿಂದ ವಿಮೋಚನೆಗೊಳ್ಳುವದನ್ನು ಎದುರುನೋಡುತ್ತಾ ಇದೆ (ರೋಮಾಪುರದವರಿಗೆ 8:19-23) ಎಂಬದನ್ನೂ ನಾವು ಅರ್ಥಮಾಡಿಕೊಳ್ಳುವವರಾಗಿದ್ದೇವೆ. ವಿಮೋಚನೆಗೊಂಡಿರುವ ಜನರಾಗಿ, ಈ ಜೀವಿತದಲ್ಲಿ ಮುಂಬರುವ ಯುಗದ ಶಕ್ತಿಗಳನ್ನು ರುಚಿನೋಡುತ್ತೇವೆ (ಇಬ್ರಿಯರಿಗೆ 6:5). ವಿಮೋಚನೆಯ ಲಾಭಗಳೂ ಇದ್ದು ಇಲ್ಲಿ ಮತ್ತು ಈಗ ಅದರನುಸಾರ ನಾವು ನಡೆಯಬಹುದಾಗಿದೆ. ಉದಾಹರಣೆಗೆ, ಭವಿಷ್ಯದಲ್ಲಿ ನಮಗೆ ಪುನರುತ್ಥಾನಗೊಳ್ಳುವ ಮಹಿಮಾ ಶರೀರಗಳಿರುತ್ತವೆ, ಆದರೆ ನಮ್ಮ ವಿಮೋಚನೆಯ ಲಾಭವಾಗಿರುವ ಸ್ವಸ್ಥತೆಯನ್ನು ಕಾಯಿಲೆ ಮತ್ತು ಅನಾರೋಗ್ಯದಿಂದ ಈಗ ಅನುಭವಿಸುವವರಾಗಿದ್ದೇವೆ. ಇದೇ ಪ್ರಕಾರ, ಯೆಶಾಯ 65:21-23 ವಚನಗಳು ಮುಂಬರುವ ಯುಗದಲ್ಲಿ ನಮ್ಮ ಕೆಲಸದ ಸ್ಥಳದ ಬಗ್ಗೆ ವಿವರಿಸುವದರಿಂದ, ವಿಮೋಚನೆಯ ಲಾಭಗಳು ನಮ್ಮ ಈಗಿನ ಕೆಲಸ, ಕೆಲಸದ ಸ್ಥಳ, ಮತ್ತು ಕೆಲಸದ ಜೀವಿತದ ಮೇಲೆ ಪ್ರಭಾವ ಬೀರುವದನ್ನು ನಾವು ನಿರೀಕ್ಷಿಸಬಹುದು.

ಬಿದ್ದುಹೋಗಿರುವ ಲೋಕದಲ್ಲಿ ವಿಮೋಚನೆಗೊಂಡಿರುವ ಒಡಂಬಡಿಕೆಯ ಜನರು

ವಿಶ್ವಾಸಿಗಳಾಗಿ, ನಾವು ವಿಮೋಚನೆಗೊಂಡಿರುವ ಜನರಾಗಿದ್ದು ಬಿದ್ದಿಹೋಗಿರುವ ಲೋಕದಲ್ಲಿ ಜೀವಿಸುತ್ತಾ ಇದ್ದರೂ ದೇವರೊಂದಿಗೆ ಒಡಂಬಡಿಕೆಯಲ್ಲಿದ್ದೇವೆ. ಆದ್ದರಿಂದ, ನಾವು ಈ ಲೋಕದಲ್ಲಿರುವ ದುಷ್ಟತನವನ್ನು ಎದುರಿಸಬೇಕು ಎಂಬದು ಸತ್ಯವಾಗಿದೆ. ಆದರೂ, ನಾವು ಕರ್ತನಿಂದ ವಿಮೋಚಿಸಲ್ಪಟ್ಟವರಾಗಿ—ಹೊಸ ಒಡಂಬಡಿಕೆಯ ಜನರಾಗಿ ಜೀವಿಸಲು ಇಲ್ಲಿ ಇದ್ದೇವೆ ಯಾಕಂದರೆ ನಮ್ಮ ಜೀವಿತಗಳಲ್ಲಿ ಶಿಲುಬೆಯ ಶಕ್ತಿ ಕಾರ್ಯಮಾಡುವಂಥದ್ದಾಗಿದೆ. ಹೀಗಿರಲಾಗಿ, ಪ್ರತಿದಿನ, ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗುವಾಗ, ನಮ್ಮ ಕೆಲಸ, ನಮ್ಮ ಕೆಲಸದ ಸ್ಥಳ, ಮತ್ತು ನಮ್ಮ ಕೆಲಸದ ಜೀವಿತದ ಮೇಲೆ ಪ್ರಭಾವ ಬೀರುವಂತೆ ಶಿಲುಬೆಯ ವಿಮೋಚನಾ ಶಕ್ತಿಯನ್ನು ನಂಬಬೇಕು. ಶಿಲುಬೆಯ ನಿಮಿತ್ತ, ಶಾಪವು ತೆಗೆದುಹಾಕಲ್ಪಟ್ಟಿದೆ ಮತ್ತು ನಮ್ಮ ಕೆಲಸದ ಸ್ಥಳ ಆಶೀರ್ವದಿಸಲ್ಪಟ್ಟಿದೆ. ಶಿಲುಬೆಯ ನಿಮಿತ್ತ, ನಾವು ಮಾಡುವ ಕೆಲಸದಲ್ಲಿ ಫಲಭರಿತತೆ ಮತ್ತು ಸಂತೋಷವನ್ನು ನಾವು ಘೋಷಿಸುತ್ತೇವೆ. ಶಿಲುಬೆಯ ನಿಮಿತ್ತ, ನಾವು ಕೆಲಸದ ಸ್ಥಳದಲ್ಲಿ ಕಾಣಿಸಿಕೊಳ್ಳುವ ಮುಳ್ಳುಗಳನ್ನು ಮತ್ತು ಕಳೆಗಳನ್ನು, ವಿರೋಧಿಸುವ, ಅಡ್ಡಿಪಡಿಸುವ, ಹಾಗೂ ನೋವನ್ನುಂಟು ಮಾಡುವ ಕಾರ್ಯಗಳನ್ನು ಇಲ್ಲದಂತೆ ಮಾಡುತ್ತೇವೆ, ಮತ್ತು ದೇವರ ಉದ್ದೇಶಗಳು ಸ್ಥಾಪನೆಯಾಗಬೇಕೆಂಬದನ್ನು ಘೋಷಿಸುತ್ತೇವೆ. ಶಿಲುಬೆಯ ನಿಮಿತ್ತ, ನಾವು ಕೆಲಸದ ವಿಷಯವಾಗಿನ ದೇವರ ಮೂಲ ಉದ್ದೇಶವನ್ನು ಮರಳೀಪಡೆಯುತ್ತೇವೆ.

ದೇವರು ಅಬ್ರಹಾಮನೊಂದಿಗೆ ರಕ್ತದ ಒಡಂಬಡಿಕೆಯನ್ನು ಸ್ಥಾಪಿಸಿದನು, ಅದನ್ನು ನಾವು ಅಬ್ರಹಾಮನ ಒಡಂಬಡಿಕೆ ಎಂದು ಕರೆಯುತ್ತೇವೆ. ಇದೇ ಪ್ರಕಾರ, ಮೋಶೆಯ ಮೂಲಕ, ದೇವರು ಧರ್ಮಶಾಸ್ತ್ರವನ್ನು ಸ್ಥಾಪಿಸಿದನು, ಇದನ್ನು ಹಳೆಯ ನಿಬಂಧನೆ ಎಂಬದಾಗಿಯೂ ಕರೆಯಲಾಗುತ್ತದೆ, ಇದು ಸಹ ರಕ್ತದ ಯಜ್ಞಗಳ ಮೇಲೆ ಆಧಾರವಾಗಿದೆ. ಈ ಒಡಂಬಡಿಕೆಗಳು ಕರ್ತನಾದ ಯೇಸು ಕ್ರಿಸ್ತನು ಕಲ್ವಾರಿ ಕ್ರೂಜೆಯ ಮೇಲೆ ಸುರಿಸಿದ ತನ್ನ ಸ್ವಂತ ರಕ್ತದ ಮೂಲಕ ಸ್ಥಾಪಿಸಿದ ಒಡಂಬಡಿಕೆಯನ್ನು ಸೂಚಿಸುತ್ತವೆ. ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಬಹಳ ಶ್ರೇಷ್ಠವಾಗಿದೆ. *"ಯೇಸು... ಎಷ್ಟೋ ಶ್ರೇಷ್ಠವಾದ ಒಡಂಬಡಿಕೆಗೆ ಹೊಣೆಗಾರನಾದನು"* (ಇಬ್ರಿಯರಿಗೆ 7:22). *"ಯೇಸು ಅದಕ್ಕಿಂತ*

ಶ್ರೇಷ್ಠವಾದ ... ಉತ್ತಮ ವಾಗ್ದಾನಗಳ ಮೇಲೆ ಸ್ಥಾಪಿತವಾದ ಉತ್ತಮವಾದ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ" (ಇಬ್ರಿಯರಿಗೆ 8:6).

"ಕೆಲಸ," "ಪರಿಶ್ರಮ," "ಐಶ್ವರ್ಯವನ್ನು ಉಂಟುಮಾಡುವದು," ಮತ್ತು ಇನ್ನಿತರೆ ವಿಷಯಗಳ ಮೇಲೆ ಅಬ್ರಹಾಮನ ಒಡಂಬಡಿಕೆ ಮತ್ತು ಹಳೆ ಒಡಂಬಡಿಕೆ ಹೇಗೆ ಪರಿಣಾಮ ಬೀರಿದವು ಎಂಬದನ್ನು ನೋಡಿಕೊಳ್ಳೋಣ. ಈ ಎರಡೂ ಒಡಂಬಡಿಕೆಗಳು ಕೆಲಸದ ಸ್ಥಳಗಳಿಗೆ ಕೇವಲ ಆಶೀರ್ವಾದ ಮಾತ್ರವಲ್ಲದೆ ಇನ್ನೂ ಹೆಚ್ಚಿನ ವಿಷಯಗಳನ್ನು ಒಳಗೊಂಡಿದ್ದವು ಎಂಬದು ಸತ್ಯವಾಗಿದೆ. ಆದರೆ, ಈ ಅಧ್ಯಯನದಲ್ಲಿ, ನಾವು ನಿರ್ದಿಷ್ಟವಾಗಿ ಕೆಲಸ, ಕೆಲಸದ ಸ್ಥಳ, ಮತ್ತು ಕೆಲಸದ ಜೀವಿತದ ಕಡೆಗೆ ಗಮನಹರಿಸುತ್ತಾ ಇದ್ದೇವೆ, ಆದ್ದರಿಂದಲೇ ಒಡಂಬಡಿಕೆಗಳು ಈ ವಿಷಯಗಳ ಮೇಲೆ ಹೇಗೆ ಪರಿಣಾಮ ಬೀರಿದವು ಎಂಬದನ್ನು ಪರೀಕ್ಷಿಸಲು ಆಸಕ್ತರಾಗಿದ್ದೇವೆ. ಬೀಳ್ಚಿಕೆಯ ಫಲಿತಾಂಶದಿಂದ ಭೂಮಿಗೆ ಶಾಪ ಬಂದಿತು, ಮತ್ತು ಮಾನವನು ಯಾವುದಾದರು ಫಲವನ್ನು ಕಾಣಬೇಕಾದರೆ ಬೆವರು ಸುರಿಸಿ ದುಡಿಯಬೇಕು ಎಂಬ ಮಾತಿನಲ್ಲಿ ಸ್ಪಷ್ಟವಾಗಿ ಗೊತ್ತಾಯಿತು. ಆಸಕ್ತಿಕರವಾದ ವಿಷಯ ಅಂದರೆ, ಅಬ್ರಹಾಮನ ಒಡಂಬಡಿಕೆ ಅಥವಾ ಹಳೆ ಒಡಂಬಡಿಕೆಯ ಅಡಿಯಲ್ಲಿದ್ದವರಿಗೆ, ದೇವರು ಪ್ರತಿಯೊಂದು ವಿಷಯದಲ್ಲಿಯೂ ಆಶೀರ್ವಾದವನ್ನು ನುಡಿದಿದ್ದಾನೆ. ಅವರು ಅವುಗಳನ್ನು ಅನುಭವಿಸಿದರು! ಹೊಸ ಒಡಂಬಡಿಕೆಯು ಹಳೆ ಒಡಂಬಡಿಕೆಗಿಂತ ಬಹಳ ಶ್ರೇಷ್ಠವಾಗಿದೆ ಎಂದು ಹೇಳಿರುವದರಿಂದ, ನಮ್ಮ ಕೆಲಸದ ಜೀವಿತದಲ್ಲಿ ವಿಮೋಚನೆಯ ದೊಡ್ಡ ಲಾಭಗಳು ಮತ್ತು ಒಡಂಬಡಿಕೆಯ ಆಶೀರ್ವಾದಗಳಿಲ್ಲದಿದ್ದರೂ, ಅವರಿಗಾದವುಗಳನ್ನೇ ನಿರೀಕ್ಷಿಸುವದು ಸಹಜವಾದ ಸಂಗತಿಯಾಗಿದೆ.

ದೇವರು ಆಶೀರ್ವಾದವನ್ನು ಘೋಷಿಸುವಾಗ, ಆ ಆಶೀರ್ವಾದವು ಸಮಗ್ರವಾಗಿರುತ್ತದೆ ಮತ್ತು ಜೀವನದ ಎಲ್ಲಾ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತದೆ ಎಂಬದನ್ನು ನಾವು ಅರ್ಥಮಾಡಿಕೊಳ್ಳಬೇಕು. ಅಬ್ರಹಾಮನಿಗೆ, ದೇವರು ಹೇಳಿದ್ದೇನೆಂದರೆ, *"ನಾನು ನಿನ್ನನ್ನು ಮತ್ತು ನಿನ್ನ ಸಂತತಿಯವರನ್ನು ಆಶೀರ್ವದಿಸುತ್ತೇನೆ."* ಅಬ್ರಹಾಮನಿಗೆ ಮತ್ತು ಅವನ ಸಂತತಿಯವರಿಗೆ ಮಾಡಲಾದ ಆಶೀರ್ವಾದದಲ್ಲಿ ಸ್ವಸ್ಥತೆಯೂ ಇರುತ್ತದೆ ಎಂದು ಆತನು ನಿರ್ದಿಷ್ಟವಾಗಿ ಎಲ್ಲಿಯೂ ಹೇಳಿಲ್ಲ. ಆದರೂ, ನಾವು ಸುವಾರ್ತೆಯಲ್ಲಿ

ಓದುವದೇನೆಂದರೆ, 18 ವರ್ಷಗಳಿಂದ ನಡು ಬೊಗ್ಗಿದವಳಾಗಿದ್ದ ಸ್ತ್ರೀಯನ್ನು ಯೇಸು ಕ್ರಿಸ್ತನು ನೋಡಿದಾಗ, ಆತನು ಆಕೆಯನ್ನು ವಾಸಿಮಾಡಿ ಪ್ರಕಟಿಸಿದ್ದೇನೆಂದರೆ ಈಕೆ ಅಬ್ರಹಾಮನ ವಂಶದವಳಾದ ಕಾರಣ ಸ್ವಸ್ಥಳಾಗುವ ಅಧಿಕಾರವನ್ನು ಹೊಂದಿದ್ದಾಳೆ. ಆತನು ಹೇಳಿದ್ದೇನೆಂದರೆ, *"ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್ ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ ಎಂದು ಉತ್ತರಕೊಟ್ಟನು"* (ಲೂಕ 13:16). ಆಕೆ ಸ್ವಸ್ಥಳಾಗುವ ಅಧಿಕಾರವನ್ನು ಹೊಂದಿದ್ದಳು ಯಾಕಂದರೆ ದೇವರು ಅಬ್ರಹಾಮನಿಗೆ ಮಾಡಿದ ಆಶೀರ್ವಾದಗಳಲ್ಲಿ ಸ್ವಸ್ಥತೆಯು ಒಂದಾಗಿದೆ ಎಂದು ಅಬ್ರಹಾಮನಿಗೆ ಆತನು ನಿರ್ದಿಷ್ಟವಾಗಿ ಹೇಳಲಿಲ್ಲವಾದರೂ ಆಕೆ ಅವನ ಆಶೀರ್ವಾದಗಳಿಗೆ ಬಾಧ್ಯಳಾಗಿದ್ದಳು. ದೇವರು ಸರಳವಾಗಿ ಹೇಳಿದ್ದೇನೆಂದರೆ, *"ನಾನು ನಿನ್ನನ್ನು ಆಶೀರ್ವದಿಸುತ್ತೇನೆ"* ಮತ್ತು ಒಡಂಬಡಿಕೆಯ ಆಶೀರ್ವಾದವನ್ನು ಅಬ್ರಹಾಮನ ಸಂತತಿಯವರೊಂದಿಗೆ ಸ್ಥಾಪಿಸುತ್ತೇನೆ (ಆದಿಕಾಂಡ 12:1-3; ಆದಿಕಾಂಡ 17:7). ಆದ್ದರಿಂದ, ದೇವರು ನಾನು ನಿಮ್ಮನ್ನು ಆಶೀರ್ವದಿಸುತ್ತೇನೆ ಎಂದು ಘೋಷಿಸುವಾಗ, ಆತನ ಮಾತಿನ ಅರ್ಥವೇನೆಂದರೆ ಆತನು ಯಾರಾಗಿದ್ದಾನೆ ಅಂದರೆ-ಆತನ ಒಳ್ಳೇತನ, ಆತನ ದಯೆ, ಆತನ ಕರುಣೆಗಳು, ಆತನ ಶಕ್ತಿ, ಆತನ ಸ್ವಸ್ಥತೆ, ಆತನ ಸೌಕರ್ಯ ಮತ್ತು ಇನ್ನಿತರ ವಿಷಯಗಳನ್ನು ನಾವು ಅನುಭವಿಸುವಂತೆ ಆತನೇನಾಗಿದ್ದಾನೋ ಅದನ್ನೆಲ್ಲಾ ನಮ್ಮ ಜೀವಿತಗಳೊಳಗೆ ಬಿಡುಗಡೆ ಮಾಡುತ್ತಾನೆ. ಕೆಳಗೆ ತಿಳಿಸಲಾಗಿರುವ ಪ್ರಕಾರ, ಅಬ್ರಹಾಮನೊಂದಿಗಿನ ಒಡಂಬಡಿಕೆ ಮತ್ತು ಹಳೆ ನಿಬಂಧನೆಯನ್ನು ನೋಡುವಾಗ, ತನ್ನ ಒಡಂಬಡಿಕೆಯ ಜನರು ಅವರ ಕೆಲಸದ ಸ್ಥಳಗಳಲ್ಲಿ ಆಶೀರ್ವಾದಗಳನ್ನು ಅನುಭವಿಸುವಂತೆ ಕರ್ತನು ಮಾಡಿದನು ಎಂಬದನ್ನು ನೋಡಬಹುದು.

ನಿಮ್ಮ ಭೂಮಿ ಆಶೀರ್ವದಿಸಲ್ಪಟ್ಟಿದೆ

ಅಬ್ರಹಾಮನು ತನ್ನ ಜೀವಿತದಲ್ಲಿ ದೇವರ ಆಶೀರ್ವಾದಗಳನ್ನು ಅನುಭವಿಸಿದನು. ಅಬ್ರಹಾಮನು ಪ್ರಾರಂಭದಿಂದಲೇ ಐಶ್ವರ್ಯವಂತನಾಗಿ ತೋರುತ್ತಾನಾದರೂ (ಆದಿಕಾಂಡ 13:2), ಅವನು ಫಲಭರಿತತೆ ಮತ್ತು ಇನ್ನೂ ಹೆಚ್ಚಿನ ಸಮೃದ್ಧಿಯನ್ನು ಕಾಣುವಂತೆ ದೇವರ ಆಶೀರ್ವಾದವು ಮಾಡಿತು. *"ಅಬ್ರಹಾಮನು ಬಹುದಿನದ ವೃದ್ಧನಾದನು. ಯೆಹೋವನು ಅವನನ್ನು ಸಕಲ*

ವಿಷಯಗಳಲ್ಲಿ ಅಭಿವೃದ್ಧಿಪಡಿಸಿದ್ದನು" (ಆದಿಕಾಂಡ 24:1). *"ಯೆಹೋವನು ನನ್ನ ದಣಿಯನ್ನು ಬಹಳವಾಗಿ ಅಭಿವೃದ್ಧಿಪಡಿಸಿ ಅವನಿಗೆ ಕುರಿದನಗಳನ್ನೂ ಬೆಳ್ಳಿಬಂಗಾರವನ್ನೂ ದಾಸದಾಸಿಯರನ್ನೂ ಒಂಟೆಗಳನ್ನೂ ಕತ್ತೆಗಳನ್ನೂ ಕೊಟ್ಟದ್ದರಿಂದ ಅವನು ಧನವಂತನಾದನು"* (ಆದಿಕಾಂಡ 24:35).

ಅಬ್ರಹಾಮನ ಮಗನಾದ, ಇಸಾಕನು, ಕೆಲಸದ ಸ್ಥಳದಲ್ಲಿ ದೇವರ ಆಶೀರ್ವಾದವನ್ನು ಅನುಭವಿಸಿದನು. *"ಇಸಾಕನು ಆ ದೇಶದಲ್ಲಿ ಬೀಜವನ್ನು ಬಿತ್ತಿ ಅದೇ ವರುಷದಲ್ಲಿ ನೂರರಷ್ಟು ಬೆಳೆಯನ್ನು ಹೊಂದಿದನು; ಯೆಹೋವನು ಅವನನ್ನು ಅಭಿವೃದ್ಧಿಪಡಿಸಿದನು; ಅವನ ಐಶ್ವರ್ಯವು ದಿನೇ ದಿನೇ ಹೆಚ್ಚಿದ್ದರಿಂದ ಬಹು ಧನವಂತನಾದನು"* (ಆದಿಕಾಂಡ 26:12,13).

ಹಳೆ ಒಡಂಬಡಿಕೆಯಡಿಯಲ್ಲಿ, ದೇವರು ತನಗೆ ವಿಧೇಯರಾಗಿ ನಡೆದುಕೊಳ್ಳುವವರಿಗೆ ಕೆಳಗೆ ಕೊಡಲಾಗಿರುವ ಆಶೀರ್ವಾದಗಳನ್ನು ಪ್ರಕಟಿಸಿದ್ದಾನೆ.

ಧರ್ಮೋಪದೇಶಕಾಂಡ 28:3-6

3 "ನಿಮಗೆ ಊರಲ್ಲಿಯೂ ಅಡವಿಯಲ್ಲಿಯೂ ಶುಭವುಂಟಾಗುವದು.

4ನಿಮ್ಮ ಸಂತಾನ ವ್ಯವಸಾಯಗಳಿಗೂ ದನಕುರಿ ಮುಂತಾದ ಪಶುಗಳಿಗೂ ಶುಭವುಂಟಾಗುವದು.

5ನಿಮ್ಮ ಪುಟ್ಟಿಗಳಿಗೂ ಕೊಣವಿಗೆಗಳಿಗೂ ಶುಭವುಂಟಾಗುವದು.

6ನೀವು ಕೆಲಸಕ್ಕೆ ಹೋಗುವಾಗಲೂ ಬರುವಾಗಲೂ ಶುಭವುಂಟಾಗುವದು."

ಬೀಳ್ವಿಕೆಯು ಕೆಲಸದ ಸ್ಥಳದ ಮೇಲೆ ಶಾಪವನ್ನು ಬರಮಾಡಿತು, ಆದರೆ ಆತನೊಂದಿಗೆ ರಕ್ತದ ಒಡಂಬಡಿಕೆಯಲ್ಲಿ ಇರುವವರಿಗೆ, ದೇವರು ಅವರ ಕೆಲಸದ ಸ್ಥಳದ ಮೇಲೆ ಆಶೀರ್ವಾದವನ್ನು ಘೋಷಿಸಿದನು. ಹೊಸ ಒಡಂಬಡಿಕೆಯಲ್ಲಿ ನಾವು ಇದನ್ನು ನಿರೀಕ್ಷಿಸಬಾರದೇ?

ನಿಮ್ಮ ಕೈಕೆಲಸಗಳೆಲ್ಲವೂ ಆಶೀರ್ವದಿಸಲ್ಪಟ್ಟಿವೆ

ಬೀಳ್ವಿಕೆಯ ನಿಮಿತ್ತ ಸಂಕಷ್ಟ, ಕಠಿಣತೆ, ಬೆವರು ಉಂಟಾಯಿತು, ಮತ್ತು ಕೆಲಸದ ಸ್ಥಳದಲ್ಲಿ ಕಷ್ಟಪಟ್ಟು ದುಡಿದರೂ ಕನಿಷ್ಠ ಫಲವನ್ನೇ ಕಾಣುವಂತೆಯೇ ಆಯಿತು. ಆತನೊಂದಿಗೆ ರಕ್ತದ ಒಡಂಬಡಿಕೆಯಲ್ಲಿದ್ದವರಿಗೆ, ದೇವರು ಅವರ ಕೆಲಸದ ಮೇಲೆ ಆಶೀರ್ವಾದಗಳನ್ನು ಪ್ರಕಟಿಸಿದನು.

ಧರ್ಮೋಪದೇಶಕಾಂಡ 28:8,12,13

[8]ನಿಮ್ಮ ಕಣಜಗಳು ಯಾವಾಗಲೂ ತುಂಬಿರುವಂತೆಯೂ ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗುವಂತೆಯೂ ನಿಮ್ಮ ದೇವರಾದ ಯೆಹೋವನು ನಿಮಗೆ ಶುಭವನ್ನು ಅನುಗ್ರಹಿಸುವನು. ಆತನು ನಿಮಗೆ ಕೊಡುವ ದೇಶದಲ್ಲಿ ನಿಮಗೆ ಶುಭವನ್ನೇ ಉಂಟುಮಾಡುವನು.

[12]ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನೂ ಸಫಲಮಾಡುವನು. ನೀವು ಅನೇಕ ಜನಗಳಿಗೆ ಸಾಲಕೊಡುವಿರೇ ಹೊರತು ಸಾಲ ತೆಗೆದುಕೊಳ್ಳುವದಿಲ್ಲ.

[13]ನೀವು ನಿಮ್ಮ ದೇವರಾದ ಯೆಹೋವನ ಆಜ್ಞೆಗಳಲ್ಲೇ ಲಕ್ಷ್ಯವಿಟ್ಟುಉ ಅವುಗಳನ್ನೇ ಅನುಸರಿಸಿ ನಡೆದರೆ ಆತನು ಇತರರಿಗೆ ನಿಮ್ಮನ್ನು ಅಧೀನಮಾಡದೆ ಎಲ್ಲರಿಗೂ ಶಿರಸ್ಸನ್ನಾಗಿಯೇ ಮಾಡುವನು; ನೀವು ಎಲ್ಲರಿಗಿಂತಲೂ ಮೇಲಣವರಾಗಿರುವಿರೇ ಹೊರತು ಕೆಳಗಣವರಾಗಿರುವದಿಲ್ಲ.

ಹಳೆ ಒಡಂಬಡಿಕೆಯ ಪ್ರಕಾರ, ದೇವರು ತನ್ನ ಜನರಿಗೆ ನಿಶ್ಚಯವಾಗಿ ಹೇಳಿದ್ದೇನೆಂದರೆ ಒಂದುವೇಳೆ ಅವರು ಆತನ ಮಾತಿನ ಮೇರೆಗೆ ಆತನ ಮಾರ್ಗಗಳಲ್ಲಿಯೇ ನಡೆದರೆ, ಅವರು ತಮ್ಮ ಕೈಕೆಲಸಗಳ ಎಲ್ಲಾ ಪ್ರಯತ್ನಗಳಲ್ಲಿಯೂ ಅಭಿವೃದ್ಧಿಯಾಗುವರು. ಹೀಗೆ, ಪವಿತ್ರಾತ್ಮನಿಂದ ಪ್ರೇರಣೆಗೊಂಡು, ಕೀರ್ತನೆಗಾರನು ಬರೆದಿರುವದೇನೆಂದರೆ,

ಕೀರ್ತನೆ 1:1-3

[1]ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ

[2]ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ ಅವನು ಎಷ್ಟೋ ಧನ್ಯನು.

[3]ಅವನು ನೀರಿನ ಕಾಲುವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು.

ಹೊಸ ಒಡಂಬಡಿಕೆಯಲ್ಲಿ ಇದನ್ನು ನಾವು ನಮಗೆ ನಿರೀಕ್ಷಿಸಬಾರದೇ?

ಐಶ್ವರ್ಯವನ್ನು ಸಂಪಾದಿಸಲು ದೇವರು ಶಕ್ತಿಯನ್ನು ಕೊಡುತ್ತಾನೆ

ಹಳೆ ಒಡಂಬಡಿಕೆಯಲ್ಲಿ ಇದ್ದವರು ಅರ್ಥಮಾಡಿಕೊಂಡದ್ದು ಏನೆಂದರೆ ತಾವು ಕರ್ತನಿಗೆ ಭಯಪಡುವವರಾಗಿ ಆತನಿಗೆ ವಿಧೇಯತೆಯುಳ್ಳವಾಗಿ ನಡೆದುಕೊಳ್ಳುವ ತನಕ ಆತನ ಒಡಂಬಡಿಕೆಯ ಭಾಗವಾಗಿ ಅವರಿಗೆ

ಐಶ್ವರ್ಯವನ್ನು ಸಂಪಾದಿಸುವ ಶಕ್ತಿಯನ್ನು ಕೊಡುವನು.

ಧರ್ಮೋಪದೇಶಕಾಂಡ 8:18

ಆದದರಿಂದ ನಿಮ್ಮ ದೇವರಾದ ಯೆಹೋವನೇ ತಾನು ನಿಮ್ಮ ಪಿತೃಗಳಿಗೆ ಪ್ರಮಾಣಪೂರ್ವಕವಾಗಿ ಮಾಡಿದ ವಾಗ್ದಾನವನ್ನು ಈಗ ನಿಮ್ಮ ಅನುಭವಕ್ಕೆ ಬಂದ ರೀತಿಯಲ್ಲಿ ನೆರವೇರಿಸುವವನಾಗಿ ನಿಮಗೆ ಇಷ್ಟು ಭಾಗ್ಯವನ್ನು ಸಂಪಾದಿಸುವದಕ್ಕೆ ಸಾಮರ್ಥ್ಯವನ್ನು ಕೊಟ್ಟವನೆಂದು ಜ್ಞಾಪಕಮಾಡಿಕೊಳ್ಳಿರಿ.

ಕೀರ್ತನೆ 112:1-3

[1]ಯಾಹುವಿಗೆ ಸ್ತೋತ್ರ!
ಯಾವನು ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ
ಆತನ ಆಜ್ಞೆಗಳಲ್ಲಿ ಅತ್ಯಾನಂದಪಡುವನೋ ಅವನೇ ಧನ್ಯನು.
[2]ಅವನ ಸಂತಾನವು ಲೋಕದಲ್ಲಿ ಬಲಿಷ್ಠವಾಗುವದು;
ನೀತಿವಂತನ ವಂಶವು ಶುಭಹೊಂದುವದು.
[3]ಅವನ ಮನೆಯಲ್ಲಿ ಧನೈಶ್ವರ್ಯಗಳಿರುವವು;
ಅವನ ನೀತಿಯು ಸದಾಕಾಲವೂ ಫಲಿಸುತ್ತಿರುವದು.

ಹೊಸ ಒಡಂಬಡಿಕೆಯಲ್ಲಿ ಇದನ್ನು ನಾವು ನಮಗೆ ನಿರೀಕ್ಷಿಸಬಾರದೇ?

ನುಂಗುವವನು ಗದರಿಕೆಗೆ ಒಳಗಾದವನಾಗಿ ನಿಂತಿದ್ದಾನೆ

ಹಳೆ ಒಡಂಬಡಿಕೆಯಲ್ಲಿದ್ದವರಿಗೆ ತಮ್ಮ ದುಡಿಮೆಯ ಫಲದಿಂದ ದೇವರನ್ನು ಘನಪಡಿಸಬೇಕು ಎಂಬದಾಗಿ ಕಲಿಸಲಾಗುತ್ತಾ ಇತ್ತು. ತಮ್ಮ ಕೆಲಸದ ಸ್ಥಳದಲ್ಲಿ ಅವರು ಸಂಪಾದನೆ ಮಾಡಿದ್ದರಲ್ಲಿ ಒಂದು ಭಾಗವನ್ನು ಕರ್ತನಿಗೆ ಕೊಡುತ್ತಾ ಇದ್ದರು. ಕರ್ತನಿಗೆ ಕೊಡುವದು, ನಿಜವಾಗಿಯೂ ದೇವರಿಗೆ ತೋರುವ ಆರಾಧನೆಯ ಕ್ರಿಯೆಯಾಗಿದೆಯಾದರೂ, ಅದರಿಂದ ಅವರು ಇನ್ನೂ ಹೆಚ್ಚಿನ ಫಲವನ್ನು ಅನುಭವಿಸಲು ಸಾಧ್ಯವಾಯಿತು.

ಜ್ಞಾನೋಕ್ತಿಗಳು 3:9,10

[9]ನಿನ್ನ ಆದಾಯದಿಂದಲೂ ಬೆಳೆಯ ಪ್ರಥಮಫಲದಿಂದಲೂ ಯೆಹೋವನನ್ನು ಸನ್ಮಾನಿಸು.
[10]ಹೀಗೆ ಮಾಡಿದರೆ ನಿನ್ನ ಕಣಜಗಳು ಸಮೃದ್ಧಿಯಿಂದ ತುಂಬುವವು, ತೊಟ್ಟಿಗಳಲ್ಲಿ ದ್ರಾಕ್ಷಾರಸವು ತುಂಬಿತುಳುಕುವದು.

ದೇವರ ಆಲಯಕ್ಕೆ ತಮ್ಮ ಬೆಳೆಯ (ಅಂದರೆ, ಆದಾಯದ, ಸಂಪಾದನೆಯ) ಹತ್ತರಲ್ಲೊಂದು ಭಾಗವನ್ನು ವಿಧೇಯರಾಗಿ ತರುತ್ತಾ ಇದ್ದವರಿಗೆ, ದೇವರು

ವಾಗ್ದಾನ ಮಾಡಿದ್ದೇನೆಂದರೆ,

ಮಲಾಕಿ 3:11
"ನುಂಗುವ ಹುಳವನ್ನು ನಾನು ನಿಮಗಾಗಿ ತಡೆಯುವೆನು
ಅದು ನಿಮ್ಮ ಭೂಮಿಯ ಫಲವನ್ನು ನಾಶಮಾಡದು;
ನಿಮ್ಮ ದ್ರಾಕ್ಷೆಯ ಹಣ್ಣು ತೋಟದಲ್ಲಿ ಉದುರಿಹೋಗದು;
ಇದು ಸೇನಾಧೀಶ್ವರ ಯೆಹೋವನ ನುಡಿ.

ಬೀಳ್ಚಿಕೆಯಿಂದಾಗಿ ಕೆಲಸದ ಸ್ಥಳದಲ್ಲಿ "ಮುಳ್ಳುಗಳು ಮತ್ತು ಕಳೆಗಳು" ಉಂಟಾದವು. ಆದರೆ ದೇವರು ತಾನಾಗಿಯೇ ತನಗೆ ವಿಧೇಯರಾಗಿ ನಡೆದುಕೊಳ್ಳುವ ತನ್ನ ಒಡಂಬಡಿಕೆಯ ಜನರ ಭೂಮಿಯ ಫಲವು ನಾಶವಾಗದೆ ಇರುವದನ್ನು ದೃಢಪಡಿಸುವ ಹೊಣೆಹೊತ್ತುಕೊಂಡನು.

ಹೊಸ ಒಡಂಬಡಿಕೆಯಲ್ಲಿ ಇದನ್ನು ನಾವು ನಮಗೆ ನಿರೀಕ್ಷಿಸಬಾರದೇ?

ನೀವು ನಿಮ್ಮ ಕೈಗಳ ಕೆಲಸದಲ್ಲಿ ಸಂತೋಷಿಸುವಿರಿ

ಹಳೆ ಒಡಂಬಡಿಕೆಯಲ್ಲಿದ್ದ ದೇವಜನರು ಅರ್ಥಮಾಡಿಕೊಂಡದ್ದೇನೆಂದರೆ ಕರ್ತನ ಆಶೀರ್ವಾದದ ಭಾಗವಾಗಿ, ನಾವು ನಮ್ಮ ಕೆಲಸ ಮತ್ತು ನಮ್ಮ ಕೆಲಸದಲ್ಲಿ ದೊರೆಯುವ ಫಲದ ಸಂತೋಷವನ್ನು ಅನುಭವಿಸಬಹುದಾಗಿದೆ. ಮತ್ತು ಅದು ನಮಗೆ ಹಿತವಾಗಿಯೇ ಇರುತ್ತದೆ.

ಕೀರ್ತನೆ 128:1,2
[1]ಯೆಹೋವನಲ್ಲಿ ಭಯಭಕ್ತಿಯುಳ್ಳವನಾಗಿ ಆತನ ಮಾರ್ಗಗಳಲ್ಲಿ ನಡೆಯುವವನು ಧನ್ಯನು.
[2]ನಿನ್ನ ಕಷ್ಟಾರ್ಜಿತವನ್ನು ನೀನೇ ಅನುಭವಿಸುವಿ;
ನೀನು ಧನ್ಯನು ನಿನಗೆ ಶುಭವಿರುವದು.

ಪ್ರಸಂಗಿ 3:13
ಇದಲ್ಲದೆ ಪ್ರತಿಯೊಬ್ಬನು ಅನ್ನಪಾನಗಳನ್ನು ತೆಗೆದುಕೊಂಡು ತನ್ನ ನಾನಾ ಪ್ರಯಾಸಗಳಲ್ಲಿಯೂ ಸುಖವನ್ನನುಭವಿಸುವದು ದೇವರ ಅನುಗ್ರಹವೇ ಎಂದು ನನಗೆ ಗೊತ್ತಿದೆ.

ಪ್ರಸಂಗಿ 5:19
ಮತ್ತೂ ಆತನು ಯಾವನಿಗೆ ಆಸ್ತಿಪಾಸ್ತಿಗಳನ್ನು ದಯಪಾಲಿಸುವದಲ್ಲದೆ ಅದನ್ನು ಅನುಭವಿಸಿ ಪಾಲಿಗೆ ಬಂದದ್ದನ್ನು ಹೊಂದಿ ತನ್ನ ಪ್ರಯಾಸದಲ್ಲಿ ಸಂತೋಷಪಡಲು ಶಕ್ತಿಕೊಡುವನೋ, ಅವನ ಸುಖವು ದೇವರ ಅನುಗ್ರಹ.

ನಿಮ್ಮ ಕೆಲಸದಲ್ಲಿ ಮತ್ತು ನಿಮ್ಮ ಕೆಲಸದ ಫಲದಲ್ಲಿ ಸಂತೋಷಪಡುವದು ದೇವರ ವರವಾಗಿದೆ. ದೇವರು ಈಗಲೂ ಈ ವರವನ್ನು, ಇಂದು, ಆತನ ಜನರಾಗಿರುವ ನಮಗೆ ಕೊಡುವವನಾಗಿದ್ದಾನೆ!

3

ಪರಿಪೂರ್ಣವಲ್ಲದ ಲೋಕದಲ್ಲಿ ಕೆಲಸ ಮಾಡುವುದು

ಈ ಅಧ್ಯಯನದಲ್ಲಿನ ನಮ್ಮ ಉದ್ದೇಶ, ವಿಶ್ವಾಸಿಗಳಾದ ನಾವುಗಳು ನಮ್ಮ ಕೆಲಸದ ಸ್ಥಳವನ್ನು ವಿಮೋಚನೆಯ ಬೆಳಕಿನಲ್ಲಿ ನೋಡುವಂತೆ ನಮ್ಮನ್ನು ಪ್ರೋತ್ಸಾಹಪಡಿಸುವದಾಗಿರುವದರಿಂದ, ನಮ್ಮ ಕೆಲಸ, ಕೆಲಸದ ಸ್ಥಳ, ಮತ್ತು ಕೆಲಸದ ಜೀವಿತದ ಬಗ್ಗೆ ದೇವರ ಮೂಲ ರಚನೆಯನ್ನು ಮರುಶೋಧಿಸಿಕೊಳ್ಳುವ ಆಯ್ಕೆಯನ್ನು ಮುಂದುವರೆಸುವದಾಗಿದೆ. ಖಂಡಿತವಾಗಿಯೂ, ನಾವು, ಯಥಾಸ್ಥಿತಿಯಲ್ಲಿ ನೆಲೆಗೊಳ್ಳಬಹುದು ಮತ್ತು ಲೋಕದಲ್ಲಿರುವ ಉಳಿದವರೆಲ್ಲರ ಹಾಗೆ ನಮ್ಮ ಕೆಲಸದ ಜೀವಿತದಲ್ಲಿ ಮುಂದುವರೆಯಬಹುದು, ಅಥವಾ ಕ್ರಿಸ್ತನ ವಿಮೋಚನಾತ್ಮಕ ಕೆಲಸವನ್ನು ಜಾರಿಗೆ ತರುವ ಮತ್ತು ಕೆಲಸದ ಸ್ಥಳದಲ್ಲಿ ನಮ್ಮ ಹೊಸ ಒಡಂಬಡಿಕೆಯ ಆಶೀರ್ವಾದಗಳನ್ನು ಹೊಂದಿಕೊಳ್ಳುವ ದೃಢವಾದ ಆಯ್ಕೆಯನ್ನು ಮಾಡಿಕೊಳ್ಳಬಹುದು.

ನಮ್ಮ ಕೆಲಸದ ಸ್ಥಳದಲ್ಲಿ ಕಾರ್ಯಗಳು ಭಿನ್ನವಾಗಿರುವದನ್ನು ನಿರೀಕ್ಷಿಸಬಹುದು.

ನೀವು ನಿಮ್ಮ ತೋಟವನ್ನು ಉಳುವಾಗ (ನಿಮ್ಮ ಕೆಲಸವನ್ನು ಮಾಡುವಾಗ), ದೇವರು ನಿಜವಾಗಿಯೂ ಉದ್ದೇಶಿಸಿದ್ದನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತೀರೋ? ವಿಮೋಚಿಸಲ್ಪಟ್ಟಿರುವ, ದೇವರ ಒಡಂಬಡಿಕೆಯ ಮಗುವಾಗಿ ನಿಮ್ಮ ಕೆಲಸ, ಕೆಲಸದ ಸ್ಥಳ ಮತ್ತು ಕೆಲಸದ ಜೀವಿತದಲ್ಲಿ ನಿಮ್ಮದಾಗಿರುವದನ್ನು ಹೊಂದಿಕೊಳ್ಳಲು ನಂಬಿಕೆಯಿಂದ ಮುಂದಾಗುವಿರೋ?

ಶಿಲುಬೆಯ ಶಕ್ತಿಯು ನಿಮ್ಮ ಕೆಲಸದ ಸ್ಥಳ ಮತ್ತು ಕೆಲಸದ ಜೀವಿತದ ಮೇಲೆ ಪ್ರಭಾವ ಬೀರುವದನ್ನು ನಿರೀಕ್ಷಿಸಿರಿ

ನಾವು ಬಿದ್ದುಹೋಗಿರುವ ಲೋಕದಲ್ಲಿ ಇದ್ದೇವೆ. ಜೀವನವು ಯಾವಾಗಲೂ ಒಂದೇ ರೀತಿ ಇರುವದಿಲ್ಲ. ಕೆಲಸದ ಸ್ಥಳಲ್ಲಿರುವ ಕಾರ್ಯಗಳು ಯಾವಾಗಲೂ ಸುಲಭವಾಗಿರುವದಿಲ್ಲ. ನಿರಾಸೆಗಳು, ಸವಾಲುಗಳು, ಪ್ರಮಾಣಿಕರಲ್ಲದ ಅಧಿಕಾರಿಗಳು ಇರುತ್ತಾರೆ ಮತ್ತು ಕೆಲಸದ ಸ್ಥಳದಲ್ಲಿ ನೀತಿನಿಷ್ಠೆಗಳಿಲ್ಲದ

ಕಾರ್ಯಗಳನ್ನು ಮಾಡುವ ಜನರು ಇರುತ್ತಾರೆ. ಮಾರುಕಟ್ಟೆಯಲ್ಲಿ ಏರಿಳಿತಗಳಾಗುತ್ತವೆ, ಆರ್ಥಿಕ ಸ್ಥಿತಿಗಳು ಉತ್ತಮವಾಗುತ್ತವೆ ಮತ್ತು ಹದಗೆಡುತ್ತವೆ, ಇದಲ್ಲದೆ ಕೆಲಸದಿಂದ ತೆಗೆದುಹಾಕುವುದು, ಕಡೆಗಣಿಸುವುದು, ಹಾಗೂ ಎಲ್ಲಾ ರೀತಿಯ ಅನಿರೀಕ್ಷಿತ ಅನಾನುಕೂಲ ಬದಲಾವಣೆಗಳು ಎದುರಾಗುತ್ತವೆ. ಅನೈತಿಕ ಕಾರ್ಯಗಳ ಮೂಲ ದೊಡ್ಡ ಲಾಭ ಮಾಡಿಕೊಳ್ಳುವ, ದೇವಭಕ್ತಿಯಿಲ್ಲ ಕಾರ್ಯಗಳನ್ನು ಪ್ರಚುರಪಡಿಸುವ, ಮತ್ತು ಇನ್ನಿತರೆ ಚಟುವಟಿಕೆಗಳಲ್ಲಿ ಆಸಕ್ತವಾಗಿರುವಂಥ ಸಂಸ್ಥೆಗಳು ಇರುತ್ತವೆ.

ಒಂದು ಕಡೆ ಬಹಳಷ್ಟು ಐಶ್ವರ್ಯವಿರುತ್ತದೆ ಮತ್ತು ಇನ್ನೊಂದು ಕಡೆ ಬಹಳಷ್ಟು ಬಡತನ ಹಾಗೂ ಕೊರತೆ ಇರುತ್ತದೆ. ಇವೆಲ್ಲವುಗಳ ನಡುವೆ, ವಿಶ್ವಾಸಿಗಳಾದ ನಾವು, ಕೆಲಸದ ಸ್ಥಳದಲ್ಲಿ ಯಾವುದೇ ಜವಾಬ್ದಾರಿಕೆ ನಮಗೆ ಇದ್ದರೂ, ವಿಮೋಚಿಸಲ್ಪಟ್ಟಿರುವ, ಒಡಂಬಡಿಕೆಯ ಜನರಾಗಿ ಕಾರ್ಯಮಾಡುವ ತೀರ್ಮಾನವನ್ನು ತೆಗೆದುಕೊಳ್ಳಬಹುದೇ?

ನನ್ನ ನಂಬಿಕೆಯ ಘೋಷಣೆ

ನಾನು ನನ್ನ ಕೆಲಸದ ಸ್ಥಳಕ್ಕೆ ಹೋಗುವಾಗ, ನನ್ನ ಕೆಲಸ, ನನ್ನ ಕೆಲಸದ ಸ್ಥಳ, ಮತ್ತು ನನ್ನ ಕೆಲಸದ ಜೀವಿತದ ಮೇಲೆ ಪ್ರಭಾವ ಬೀರುವ ಶಿಲುಬೆಯ ವಿಮೋಚನಾ ಶಕ್ತಿಯನ್ನು ಹೊಂದಿಕೊಳ್ಳುತ್ತೇವೆ. ಶಿಲುಬೆಯ ನಿಮಿತ್ತ, ಶಾಪವು ಬುಡಮೇಲಾಗಿದೆ, ಮತ್ತು ನನ್ನ ಕೆಲಸದ ಸ್ಥಳ ಆಶೀರ್ವದಿಸಲ್ಪಟ್ಟಿದೆ. ಶಿಲುಬೆಯ ನಿಮಿತ್ತ, ನಾನು ಮಾಡುವ ಕೆಲಸದಲ್ಲಿ ಫಲಭರಿತತೆ ಮತ್ತು ಸಂತೋಷವನ್ನು ಘೋಷಿಸುತ್ತೇನೆ. ಶಿಲುಬೆಯ ನಿಮಿತ್ತ, ನಾನು ಕೆಲಸದ ಸ್ಥಳದಲ್ಲಿ ಮುಳ್ಳುಗಳನ್ನು ಮತ್ತು ಕಳೆಗಳನ್ನು, ವಿರೋಧಿಸುವ, ಅಡ್ಡಿಪಡಿಸುವ ಹಾಗೂ ನೋವನ್ನುಂಟು ಮಾಡುವ ಕಾರ್ಯಗಳನ್ನು ತೆಗೆದುಹಾಕಿ, ದೇವರು ಸ್ಥಾಪಿಸಿರುವ ಉದ್ದೇಶಗಳನ್ನು ಘೋಷಿಸುತ್ತೇನೆ. ಶಿಲುಬೆಯ ನಿಮಿತ್ತ, ಕೆಲಸದ ಸ್ಥಳದ ವಿಷಯವಾಗಿರುವ ದೇವರು ಮೂಲ ಉದ್ದೇಶವನ್ನು ಮತ್ತೆ ಅನುಸರಿಸುತ್ತೇನೆ.

ನಿಮ್ಮ ಕೆಲಸದ ದಿನದ ಮೂಲಕ ದೇವರನ್ನು ಆರಾಧಿಸಿರಿ

ನಿಮ್ಮ ಸುತ್ತಮುತ್ತಲಿನಲ್ಲಿರುವ ಜನರು "ಹಣದಾಸೆಯಲ್ಲಿ ಮುಳುಗಿರಬಹುದು," ಹೇಗಾದರು ಮಾಡಿ ಹಣ ಸಂಪಾದನೆ ಮಾಡಬೇಕೆಂದು ಬಿಡುವಿಲ್ಲದೆ ಅದರ ಹಿಂದೆ ಓಡುತ್ತಿರಬಹುದು, ನೀವು, ದಿನದ ಕಾರ್ಯದಾದ್ಯಂತ

ಆತನನ್ನು ಆರಾಧಿಸಲು ಮತ್ತು ಆತನ ಪ್ರಸನ್ನತೆಯನ್ನು ಅನುಭವಿಸಲು ಪ್ರಯತ್ನಿಸುತ್ತೀರೋ? ದಿನದಾದ್ಯಂತ ನಿಮ್ಮ ಕೆಲಸದ ಸ್ಥಳದಲ್ಲಿ ನೀವು ದೇವರ ಪ್ರಸನ್ನತೆಯನ್ನು ನಿರೂಪಿಸುತ್ತೀರೋ? ಉಳಿದ ಎಲ್ಲಾ ಕಾರ್ಯಗಳು ನಿಮಗೆ ಕೊಡಲ್ಪಡುತ್ತವೆ ಎಂಬದನ್ನು ತಿಳಿದವರಾಗಿ ನೀವು ನಿಮ್ಮ ಕೆಲಸದ ದಿನದಲ್ಲಿ ಯಾವಾಗಲೂ ಮೊದಲು ಆತನ ರಾಜ್ಯ ಮತ್ತು ನೀತಿಗಾಗಿ ತವಕಿಸಲು ತೀರ್ಮಾನಿಸುತ್ತೀರೋ (ಮತ್ತಾಯ 6:33)?

ಇದನ್ನು ಮಾಡಲು ಇರುವ ಕೆಲವು ವಿಧಾನಗಳು ದಿನದಾದ್ಯಂತ ನೀವು ನಿಮ್ಮ ಆಂತರ್ಯದಲ್ಲಿ ಪ್ರಾರ್ಥನೆ ಮಾಡಬೇಕು. ದಿನವಿಡೀ ದೇವರಿಗೆ ಸಣ್ಣ ಪ್ರಾರ್ಥನಾ "ಟ್ವೀಟ್ ಗಳನ್ನು" ಕಳುಹಿಸುವಂತೆ ಇದು ಇರುತ್ತದೆ. ನೀವು ಏನು ಮಾಡಲಿದ್ದೀರೋ ಅದನ್ನು ಅಂದರೆ—ನೀವು ತೆಗೆದುಕೊಳ್ಳುವ ತೀರ್ಮಾನದ ಬಗ್ಗೆ, ನೀವು ಭಾಗವಹಿಸಲಿರುವ ಕೂಟದ ಬಗ್ಗೆ, ನೀವು ಕೆಲಸ ಮಾಡಲಿರುವ ವಿಧಾನದ ಬಗ್ಗೆ, ನೀವು ಪೂರೈಸಬೇಕಾಗಿರುವ ಮಾರಾಟದ ಗುರಿಗಳ ಬಗ್ಗೆ, ನೀವು ಮಾಡಬೇಕಾಗಿರುವ ಭಾಷಣದ ಬಗ್ಗೆ ... ಎಲ್ಲವುಗಳ ಬಗ್ಗೆ ಆತನೊಂದಿಗೆ ಮಾತನಾಡಿರಿ. ನೀವು ನೋಡುವ ಪ್ರತಿಯೊಂದು ಸಣ್ಣ ಆಶೀರ್ವಾದಗಳಿಗಾಗಿ, ಸಂಭವಿಸುವ ಪ್ರತಿಯೊಂದು ಒಳ್ಳೆಯ ಕಾರ್ಯಗಳಿಗಾಗಿ, ನಿಮ್ಮ ಜೊತೆಯಲ್ಲಿ ಕೆಲಸ ಮಾಡುವವರಿಗಾಗಿ ಮತ್ತು ಇನ್ನಿತರ ವಿಷಯಗಳಿಗಾಗಿ ಆತನಿಗೆ ಕೃತಜ್ಞತೆಯನ್ನು ಸಲ್ಲಿಸಿರಿ.

ದಿನವಿಡೀ ಆತನು ಜೊತೆಯಲ್ಲಿದ್ದಾನೆ ಎಂಬ ಅರಿವುಳ್ಳವರಾಗಿರಿ. ನಿಮಗೆ ಅವಕಾಶ ಸಿಗುವಾಗಲೆಲ್ಲಾ, ನಿಮ್ಮೊಳಗೆ ಹಾಡು ಇರಲಿ. ನೀವು ನಿಮ್ಮೊಳಗೆ *"ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ"* (ಎಫೆಸದವರಿಗೆ 5:19,20).

ದಿನವಿಡೀ ದೇವರ ಸಮಾಧಾನ ಮತ್ತು ಪ್ರೀತಿಯಲ್ಲಿ ನಡೆದುಕೊಳ್ಳಿರಿ. ಸಮಾಧಾನದಲ್ಲಿ ಮತ್ತು ಪ್ರೀತಿಯಲ್ಲಿ ನಡೆಯುವದು ಅಂದರೆ ಆತನ ಪ್ರಸನ್ನತೆಯಲ್ಲಿ "ಆತನಲ್ಲಿ" ನಡೆಯುವದಾಗಿದೆ. *"...ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ*

ನೆಲೆಗೊಂಡಿದ್ದಾನೆ" (1 ಯೋಹಾನ 4:16).

ದೇವರನ್ನು ಆರಾಧಿಸಿರಿ ಮತ್ತು ಆತನಿಗಾಗಿ ಕೆಲಸ ಮಾಡಿರಿ

ನೀವು ನಿಮ್ಮ ಕೆಲಸವನ್ನು ಸಾಧಾರಣ ಕೆಲಸವೆಂದು, ಅನಾವಶ್ಯಕವಾದ ಕೆಟ್ಟತನವೆಂದು, ಸಹಿಸಿಕೊಳ್ಳಲೇ ಬೇಕಾದ ಭಾರವೆಂದು, ಅಥವಾ ಬೇರೆ ಯಾವುದೋ "ಲೌಕಿಕ" ಅಥವಾ ದೇವಭಕ್ತಿಯಿಲ್ಲದ ಕಾರ್ಯವೆಂದು ಯೋಚಿಸಬೇಡಿರಿ. ದೇವರು ಕೆಲಸವನ್ನು ರೂಪಿಸಿದ್ದಾನೆ ಮತ್ತು ಅದು ಒಳ್ಳೆಯ ವಿಷಯವಾಗಿದೆ. ನೀವೇನು ಮಾಡಬೇಕೆಂದು ದೇವರು ಬಯಸುತ್ತಾನೋ ಅದನ್ನು ನೀವು ಮಾಡುತ್ತಿರುವ ತನಕ, ಆತನು ಒಪ್ಪಿಸಿರುವ ಕೆಲಸದಲ್ಲಿ ನೀವು ಇರುವಿರಿ. ನೀವು ಆತನ ಚಿತ್ತವನ್ನು ನೆರವೇರಿಸುತ್ತಿರುವಿರಿ. ನಿಮ್ಮ ಕೆಲಸ ಮತ್ತು ಆರಾಧನೆ ದೇವರಿಗಾಗಿ ನಡೆಯುತ್ತಲಿರುತ್ತದೆ. ನೀವು ಆರಾಧನೆಮಾಡುವಾಗ, ಪೂರ್ಣಹೃದಯದಿಂದ ಅದನ್ನು ಮಾಡುವಿರಿ. ಹಾಗೆಯೇ, ನೀವು ಕೆಲಸ ಮಾಡುವಾಗ, ದೇವರಿಗೆಂದು ಪೂರ್ಣಹೃದಯದಿಂದ ಮಾಡಿರಿ.

ಕೊಲೊಸ್ಸೆಯವರಿಗೆ 3:23,24

[23]ನೀವು ಯಾವ ಕೆಲಸವನ್ನು ಮಾಡಿದರೂ ಅದನ್ನು ಮನುಷ್ಯರಿಗೋಸ್ಕರವೆಂದು ಮಾಡದೆ ಕರ್ತನಿಗೋಸ್ಕರವೇ ಎಂದು ಮನಃಪೂರ್ವಕವಾಗಿ ಮಾಡಿರಿ;

[24]ಕರ್ತನಿಂದ ಪರಲೋಕ ಬಾಧ್ಯತೆಯೆಂಬ ಪ್ರತಿಫಲವನ್ನು ಹೊಂದುವೆವೆಂದು ತಿಳಿದಿದ್ದೀರಲ್ಲಾ. ನೀವು ಕರ್ತನಾದ ಕ್ರಿಸ್ತನಿಗೇ ದಾಸರಾಗಿದ್ದೀರಿ.

ನಿಮಗೆ ಇಷ್ಟವಿಲ್ಲದೆ ಇರುವ ಕೆಲವು ಕಾರ್ಯಗಳೂ ಇರುತ್ತವೆ ಎಂಬದು ಸತ್ಯವಾಗಿದೆ. ನಿಮಗೆ ಕೊಡಲಾಗುವ ಕೆಲವು ಕಾರ್ಯಗಳಿಂದ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ನಿಮಗೆ ಅನ್ನಿಸಬಹುದು. ಕೆಲವು ದಾರಿಯಿಲ್ಲದ ರಸ್ತೆಗಳಿಗೆ ನಿಮ್ಮನ್ನು ಕಳುಹಿಸಬಹುದು ಮತ್ತು ನಿಮಗೆ ಹೇಳಾಗಿರುವದನ್ನು ಮಾಡಲು ಖಂಡಿತವಾಗಿಯೂ ಅಸಾಧ್ಯ ಎಂದು ನಿಮಗೆ ಗೊತ್ತಿರಬಹುದು. ನೀವು ಮಾಡುವ ಕಾರ್ಯಗಳನ್ನು ಎಂದಿಗೂ ಶ್ಲಾಘಿಸದೆ ಇರುವಂಥ ಕೃತಜ್ಞತೆಯಿಲ್ಲದ ಅಧಿಕಾರಿಗಳು ನಿಮಗೆ ಇರಬಹುದು. ನಿಮ್ಮ ಉತ್ತಮ ಪರಿಶ್ರಮಗಳನ್ನು ಗುರುತಿಸುವವರು ಸಹ ಯಾರೂ ಇಲ್ಲದೆ ಇರಬಹುದು. ಇಂಥ ಪರಿಸ್ಥಿತಿಗಳು ಕೆಲಸದ ಸ್ಥಳದಲ್ಲಿ ನಿಮಗೆ ಎದುರಾಗುತ್ತವೆ. ಆದರೆ, ಇಂಥ ಕಾರ್ಯಗಳ ನಡುವೆಯೂ, ದೇವರನ್ನು ಎದುರುನೋಡುತ್ತಾ ಕರ್ತನಿಗಾಗಿ ಮಾಡುತ್ತಾ ಇದ್ದೇವೆಂದು ಸಂತೋಷವುಳ್ಳ, ಕೃತಜ್ಞತಾ ಹೃದಯದೊಂದಿಗೆ ನಿಮಗೆ ಒಪ್ಪಿಸಲಾಗಿರುವ ಕೆಲಸವನ್ನು ಮಾಡಲು ನೀವು ಮುಂದಾಗುತ್ತೀರೋ?

"ಮನುಷ್ಯರಿಗೋಸ್ಕರವಲ್ಲ, ಕರ್ತನಿಗೋಸ್ಕರ ಸೇವೆಮಾಡುತ್ತೇವೆಂದು ಚಿತ್ತಪೂರ್ವಕವಾಗಿ ಸೇವೆಮಾಡಿರಿ" (ಎಫೆಸದವರಿಗೆ 6:7).

ದೇವರು ಕೆಲಸದಲ್ಲಿ ನಿಮ್ಮ ಜೊತೆಯಲ್ಲಿದ್ದಾನೆ

ನೀವು ನಿಮ್ಮ ಕೆಲಸದ ಸ್ಥಳಕ್ಕೆ ಹೋಗುವಾಗ, ನೀವು ಅಲ್ಲಿಗೆ ಒಂಟಿಯಾಗೊ ಹೋಗುತ್ತಾ ಇಲ್ಲ. ದೇವರು ಅಲ್ಲಿಗೆ ನಿಮ್ಮ ಜೊತೆಯಲ್ಲಿ ಬರುತ್ತಾನೆ. ನೀವು ಅಲ್ಲಿ ಆತನ ಸೇವಕನಾಗಿ ಇರುವಿರಿ (ಎಫೆಸದವರಿಗೆ 6:6). ತನ್ನ ಪವಿತ್ರಾತ್ಮನ ಮೂಲಕ ಅಲ್ಲಿ ನಿಮ್ಮನ್ನು ಬಲಪಡಿಸಲು, ನಿಮಗೆ ಕಾರ್ಯಗಳನ್ನು ಕಲಿಸಲು, ನಿಮಗೆ ವಿಷಯಗಳನ್ನು ಪ್ರಕಟಪಡಿಸಲು, ನಿಮ್ಮ ಕೆಲಸದ ಸ್ಥಳದಲ್ಲಿ ಜ್ಞಾನ, ತಿಳುವಳಿಕೆ, ಕೌಶಲ್ಯ, ಪ್ರಕಟನೆ, ಒಳನೋಟ ಮತ್ತು ಇನ್ನಿತರ ಕಾರ್ಯಗಳನ್ನು ಕೊಡಲು ದೇವರು ನಿಮ್ಮ ಜೊತೆಯಲ್ಲಿರುತ್ತಾನೆ. ರಚನೆ ಮಾಡಲು, ಸಮಸ್ಯೆಗಳನ್ನು ಬಗೆಹರಿಸಲು, ಜನರ ನಡುವೆಯ ಜಗಳಗಳನ್ನು ಬಗೆಹರಿಸಲು, ಮುಂದಿನ ಹಾದಿಗೆ ಯೋಜನೆಗಳನ್ನು ಸಿದ್ಧಮಾಡಲು ಮತ್ತು ಇನ್ನಿತರೆ ಕಾರ್ಯಗಳನ್ನು ನಡೆಸಲು ನಿಮಗೆ ಸಹಾಯ ಮಾಡುವದಕ್ಕಾಗಿ ಆತನು ಅಲ್ಲಿರುವನು. ಆದ್ದರಿಂದ, ನಿಮ್ಮ ಕೆಲಸದ ಸ್ಥಳದಲ್ಲಿ, ನೀವು ಆತನ ಕಡೆಗೆ ನಿಮ್ಮ ಗಮನವನ್ನು ಕೊಡುತ್ತೀರೋ, ಆತನ ಜ್ಞಾನವನ್ನು ಹುಡುಕುತ್ತೀರೋ, ಮತ್ತು ನಿಮ್ಮ ಮೂಲಕ ಆತನ ಕ್ರಿಯಾತ್ಮಕ ಸಾಮರ್ಥ್ಯಗಳು ಬಿಡುಗಡೆಗೊಳ್ಳಲು ಬೇಡಿಕೊಳ್ಳುತ್ತೀರೋ? ನಿಮ್ಮ ಕೆಲಸದ ಸ್ಥಳದಲ್ಲಿ ನಿಮಗೆ ಯಾವುದೇ ಜವಾಬ್ದಾರಿಕೆಯನ್ನು ಒಪ್ಪಿಸಿದ್ದರೂ ಅದನ್ನು ನಿಭಾಯಿಸಲು ದೇವರೊಂದಿಗೆ ಜೊತೆ ಕೆಲಸಗಾರರಾಗಿ ಕೆಲಸ ಮಾಡುತ್ತಿರುವ ಅರಿವು ನಿಮಗಿದೆಯೇ? ಒಂದುವೇಳೆ ನೀವು ರೈತನಾಗಿರಬಹುದು, ಅಥವಾ ಶಾಲಾ ಶಿಕ್ಷಕನಾಗಿರಬಹುದು, ಉದ್ಯಮಿಯಾಗಿರಬಹುದು, ಅಥವಾ ಮಾರಾಟಗಾರನಾಗಿರಬಹುದು, ಅಥವಾ ನೀವು ಏನೇಮಾಡುತ್ತಾ ಇದ್ದರೂ, ದೇವರು ನಿಮ್ಮ ಜೊತೆ ಕೆಲಸ ಮಾಡಲು ಬಯಸುವವನಾಗಿದ್ದಾನೆ!

ಫಲದಾಯಕತೆ, ಸಮೃದ್ಧಿ ಮತ್ತು ಹೆಚ್ಚಳವನ್ನು ಸಹಜವಾದ ಫಲಿತಾಂಶವಾಗಿ ಎದುರುನೋಡಿರಿ

ನೀವು ದೇವರೊಂದಿಗೆ ಒಡಂಬಡಿಕೆಯಲ್ಲಿರುವ ಮತ್ತು ದೇವರು ನಿಮ್ಮನ್ನು ಧನ್ಯರೆಂದು ಘೋಷಿಸಿರುವ ಕಾರಣ, ಫಲದಾಯಕತೆ, ಸಮೃದ್ಧಿ ಮತ್ತು ಹೆಚ್ಚಳವನ್ನು ನಿರೀಕ್ಷಿಸಿರಿ. ಹಿಂದಿನ ಅಧ್ಯಾಯದಲ್ಲಿ ಇದರ ಬಗ್ಗೆ

ಹೇಳಬೇಕಾಗಿರುವ ಬಹುತೇಕ ವಿಷಯಗಳನ್ನು ಹೇಳಿದ್ದೇವೆ.

- ನಿಮ್ಮ ಭೂಮಿ (ಕೆಲಸದ ಸ್ಥಳ) ಆಶೀರ್ವದಿಸಲ್ಪಟ್ಟಿದೆ.
- ನಿಮ್ಮ ಕೈ ಪ್ರಯಾಸದ ಎಲ್ಲಾ ಕೆಲಸಗಳು ಆಶೀರ್ವದಿಸಲ್ಪಟ್ಟಿವೆ.
- ಐಶ್ವಯವನ್ನು ಸಂಪಾದಿಸಲು ದೇವರು ನಿಮಗೆ ಶಕ್ತಿಯನ್ನು ಕೊಡುತ್ತಾನೆ.
- ನುಂಗುವವನು ಗದರಿಕೆಗೆ ಒಳಪಟ್ಟವನಾಗಿ ನಿಂತಿದ್ದಾನೆ ಮತ್ತು ನಿನ್ನ ಪರಿಶ್ರಮದ ಫಲವನ್ನು ನಾಶಮಾಡಲಾರನು.

ಇದರ ಅರ್ಥ ನಿಮಗೆ ಸೋಲು ಅಥವಾ ಹಿನ್ನಡೆ ಅಥವಾ ನಿರಾಸೆ ಆಗುವದಿಲ್ಲ ಎಂದಲ್ಲ. ಈ ಕಾರ್ಯಗಳು ಸಂಭವಿಸುತ್ತವೆ. ಆದರೂ, ಈ ಎಲ್ಲಾ ಕಾರ್ಯಗಳ ಹೊರತಾಗಿಯೂ ಎದ್ದುನಿಲ್ಲುವ ನಂಬಿಕೆ ಮತ್ತು ಧೈರ್ಯವನ್ನು ನೀವು ಪಡೆಯಬಹುದು ಯಾಕಂದರೆ ನೀವು ದೇವರೊಂದಿಗೆ ಒಡಂಬಡಿಕೆಯಲ್ಲಿರುವಿರಿ ಮತ್ತು ದೇವರು ಈಗಲೂ ನಿಮ್ಮ ಕಡೆ ಇದ್ದಾನೆ ಎಂಬದು ನಿಮಗೆ ಗೊತ್ತಿದೆ. ಪರಿಸ್ಥಿತಿ ಏನೇಆಗಿದ್ದರೂ, ನೀವು ಪೂರ್ತಿಯಾಗಿ ನಂಬಿಕೆ ಮತ್ತು ಧೈರ್ಯವುಳ್ಳವರಾಗಿರುವಿರಿ, ಹಾಗೂ ದೇವರು ನಿಮ್ಮನ್ನು ಫಲದಾಯಕತೆ, ಸಮೃದ್ಧಿ, ಮತ್ತು ಹೆಚ್ಚಳದಲ್ಲಿ ಮುನ್ನಡೆಸುತ್ತಾನೆ ಎಂದು ನಿರೀಕ್ಷಿಸುವಿರಿ. ಖಂಡಿತವಾಗಿಯೂ ಆತನು ಮುನ್ನಡೆಸುತ್ತಾನೆ!

ಘೋರವಾದ ಸಮಯಗಳಲ್ಲಿಯೂ, ಆತನು ನಿಮ್ಮನ್ನು ನೋಡಿಕೊಳ್ಳುವದಾಗಿ ವಾಗ್ದಾನ ಮಾಡಿದ್ದಾನೆ.

ಕೀರ್ತನೆಗಳು 33:18,19
18ಯೆಹೋವನಾದರೋ ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕಟಾಕ್ಷಿಸುತ್ತಾನೆ;
ತನ್ನ ಕೃಪೆಯನ್ನು ನಿರೀಕ್ಷಿಸುವವರನ್ನು ಲಕ್ಷಿಸುತ್ತಾನೆ.
19ಅವರ ಪ್ರಾಣವನ್ನು ಮರಣದಿಂದ ತಪ್ಪಿಸುವನು;
ಬರಗಾಲದಲ್ಲಿ ಅವರ ಜೀವವನ್ನು ಉಳಿಸುವನು.

ಕೀರ್ತನೆಗಳು 37:18,19
18ಯೆಹೋವನು ಸದ್ಭಕ್ತರ ಜೀವಮಾನವನ್ನು ಲಕ್ಷಿಸುತ್ತಾನೆ;
ಅವರ ಸ್ವಾಸ್ಥ್ಯವು ಶಾಶ್ವತವಾಗಿ ನಿಲ್ಲುವದು.
19ಅವರಿಗೆ ವಿಪತ್ಕಾಲದಲ್ಲಿಯೂ ಆಶಾಭಂಗವಾಗುವದಿಲ್ಲ;
ಬರಗಾಲದಲ್ಲಿಯೂ ಅವರಿಗೆ ಕೊರತೆಯಿಲ್ಲ.

ನಿಮ್ಮ ಕೆಲಸವು ಸಂತೋಷಕರವಾಗಿರಬೇಕು, ಆಹ್ಲಾದಕರವಾಗಿರಬೇಕು

ನಾವು ಕೆಲಸವನ್ನು ಸಂತೋಷದಿಂದ ಮಾಡುವ ರೀತಿಯಲ್ಲಿ ದೇವರು ಅದನ್ನು ರೂಪಿಸಿದ್ದಾನೆ. ನೀವು ಮಾಡಬೇಕೆಂದು ಆತನು ರೂಪಿಸಿರುವ ಕೆಲಸದಲ್ಲಿ ನೀವು ಗರಿಷ್ಠವಾಗಿ ನಿಮ್ಮನ್ನು ತೊಡಗಿಸಿಕೊಳ್ಳುವ ಸ್ಥಾನದಲ್ಲಿ ನಿಮ್ಮನ್ನು ಇಡುವಂತೆ ದೇವರನ್ನು ಬೇಡಿಕೊಳ್ಳಿರಿ. ಆಗ ನೀವು ಮಾಡುತ್ತಿರುವ ಕೆಲಸದಲ್ಲಿ ವೇಗವಾಗಿ ಬೆಳೆಯಲು ಮತ್ತು ಸಂತೋಷಿಸಲು ಸಾಧ್ಯವಾಗುತ್ತದೆ. ನೀವು ಮಾಡುತ್ತಿರುವ ಕಾರ್ಯದಲ್ಲಿ ಪ್ರಗತಿಯಾಗುತ್ತಲೇ ಇರಿ. ಆತನು ಪ್ರಕಟಪಡಿಸಲು ಪ್ರಯತ್ನಿಸುವಂಥ ಹೊಸ ಕಾರ್ಯಗಳಲ್ಲಿ ಬದಲಾವಣೆಗಳನ್ನು ಮತ್ತು ಪರಿವರ್ತನೆಗಳನ್ನು ಮಾಡಿಕೊಳ್ಳಲು ಹೆದರಿಕೊಳ್ಳಬೇಡಿರಿ. ಆತನ ಸಂತೋಷವನ್ನು ನಿಮ್ಮ ಹೃದಯದಲ್ಲಿ ಕೆಲಸದ ಸ್ಥಾನಕ್ಕೆ ತೆಗೆದುಕೊಂಡು ಹೋಗಿರಿ. ನೀವು ಮಾಡುತ್ತಿರುವದರಲ್ಲಿ ಸಂತೋಷಿಸಿರಿ. ನಿಮ್ಮ ಕೆಲಸದ ಸ್ಥಳದಲ್ಲಿ ಆತನ ಒಳ್ಳೇತನವನ್ನು ಆಚರಿಸಿರಿ.

ನಿಮ್ಮ ಕೆಲಸದಲ್ಲಿ ಅಸಮಾಧಾನ, ವಿಶ್ರಾಂತಿಯಿಲ್ಲದಿರುವಿಕೆ ಮತ್ತು ಇನ್ನಿತರೆ ಕಾರ್ಯಗಳನ್ನು ನೀವು ಅನುಭವಿಸುವಾಗ, ಇವುಗಳ ಬಗ್ಗೆ ದೇವರೊಂದಿಗೆ ಮಾತನಾಡಲು ಸಮಯವನ್ನು ತೆಗೆದುಕೊಳ್ಳಿರಿ. ಕೆಲವೊಮ್ಮೆ, ನಾವು ಮನೋಭಾವನೆಯನ್ನು ಸರಿಮಾಡಿಕೊಂಡರೆ ಸಾಕಾಗುತ್ತದೆ—ನಮ್ಮ ಕೆಲಸ್ದಲ್ಲಿ ನಮ್ಮ ಮನಸ್ಥಿತಿ ಬದಲಾಗಬೇಕು. ಕೆಲವೊಮ್ಮೆ, ಅಸಮಾಧಾನವೂ ಬದಲಾವಣೆ ಅವಶ್ಯವಾಗಿದೆ ಎಂಬದಕ್ಕೆ ಸೂಚನೆಯಾಗಿರುವ ಸಾಧ್ಯತೆಯಾಗಿರುತ್ತದೆ. ದೇವರ ಮಾರ್ಗದರ್ಶನವನ್ನು ಬಯಸಿರಿ ಮತ್ತು ಆತನೊಂದಿಗೆ ಮುಂದೆ ಸಾಗಿರಿ. ಸಂತೋಷದ ಸ್ಥಿತಿಯಲ್ಲಿರಿ!

ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು 2000 ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ"*** **ಎಂದು ಹೇಳುತ್ತದೆ (ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."* (ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"* (ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.

ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ

ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.

ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.

ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.

ಆಮೇನ್.

ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ಪಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್ ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word—The Miracle Seed
How to Help Your Pastor
Integrity
Interpreting Scripture
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses—Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work—Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

- **ಹದಿಹರೆಯದವರು**
- **ವಯಕ್ತಿಕ ಹೊಂದಾಣಿಕೆಗಳು**
- **ಸಂಭಂದಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ / ಮಾದಕವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

ವೆಬ್ಸೈಟ್: chrysalislife.org
ದೂರವಾಣಿ: +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
ಇಮೆಲ್: counselor@chrysalislife.org

ಕ್ರಿಸಾಲಿಸ್ ಕೌನ್ಸೆಲಿಂಗ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನಾ ಒಂದು ಸೇವೆಯಾಗಿದೆ.

ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಪ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

ಖಾತೆಯ ಹೆಸರು: All Peoples Church

ಖಾತೆ ಸಂಖ್ಯೆ: 50200068829058

IFSC ಕೋಡ್: HDFC0004367

ಬ್ಯಾಂಕ್: HDFC Bank, 7M/308, 80 Ft Road, HRBR Layout, Kalyan Nagar, Bengaluru, Karnataka 560043

ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ **apcwo.org/give**.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!


ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!


DOWNLOAD THE FREE APP!

Search for
"All Peoples Church Bangalore"
in the App or Google play stores.

Available on the App Store

ANDROID APP ON Google play





A daily 5-minute video devotional.
A daily Bible reading and prayer guide.
5-minute Sermon summary.
Toolkit with Scriptures on various topics to build faith and information to share the Gospel.
Resources with sermons, sermon notes, TV programs, books, music and more.

IF YOU LOVE IT, TELL OTHERS ABOUT IT!

निःशुल्क ऐप डाउनलोड करें:

ऐप स्टोर या प्ले स्टोर में खोजें
“ऑल पीपुल्स चर्च (APCWO)”/
All Peoples Church Hindi

Available on the App Store

ANDROID APP ON Google Play



विश्वास को मजबूत करने और सुसमाचार साझा करने के लिए विभिन्न विषयों पर आधारित वचनों के टूलकिट।
उपदेशों, टीवी कार्यक्रमों, पुस्तकों, संगीत और बहुत कुछ से भरे संसाधन।
अगर आपको यह पसंद आए, तो
दूसरों को भी इसके बारे में बताएं!

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು
apcbiblecollege.org

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು—ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಚಿಕ ವಿಷಯಗಳನ್ನು ನೀಡುತ್ತೇವೆ.

- **ಆನ್-ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ-ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

ಅನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ಕೆಲಸದ ಸ್ಥಳದಲ್ಲಿ ಬೀಳ್ವಿಕೆಯು ತನ್ನದೇ ಪರಿಣಾಮವನ್ನು ಬೀರಿದೆ. ಕೆಲಸದ ಸ್ಥಳವು ಶಾಪಗ್ರಸ್ತವಾಯಿತು. ಫಲವನ್ನು ಅನುಭವಿಸಬೇಕಾದರೆ ಬೆವರು ಸುರಿಸಿ, ಕಷ್ಟಪಟ್ಟು ದುಡಿಯಬೇಕು, ಇದು ಒಬ್ಬ ವ್ಯಕ್ತಿಯ ಜೀವನದುದ್ದಕ್ಕೂ ಮುಂದುವರೆಯುತ್ತದೆ.

ವಿಶ್ವಾಸಿಗಳಾಗಿ, ನಾವು ವಿಮೋಚನೆಗೊಂಡಿರುವ ಜನರಾಗಿದ್ದು ಬಿದ್ದಿಹೋಗಿರುವ ಲೋಕದಲ್ಲಿ ಜೀವಿಸುತ್ತಾ ಇದ್ದರೂ ದೇವರೊಂದಿಗೆ ಒಡಂಬಡಿಕೆಯಲ್ಲಿದ್ದೇವೆ. ಆದ್ದರಿಂದ, ನಾವು ಈ ಲೋಕದಲ್ಲಿರುವ ದುಷ್ಪತನವನ್ನು ಎದುರಿಸಬೇಕು ಎಂಬದು ಸತ್ಯವಾಗಿದೆ. ಆದರೂ, ನಾವು ಕರ್ತನಿಂದ ವಿಮೋಚಿಸಲ್ಪಟ್ಟವರಾಗಿ-ಹೊಸ ಒಡಂಬಡಿಕೆಯ ಜನರಾಗಿ ಜೀವಿಸಲು ಇಲ್ಲಿ ಇದ್ದೇವೆ ಯಾಕಂದರೆ ನಮ್ಮ ಜೀವಿತಗಳಲ್ಲಿ ಶಿಲುಬೆಯ ಶಕ್ತಿ ಕಾರ್ಯಮಾಡುವಂಥದ್ದಾಗಿದೆ. ಹೀಗಿರಲಾಗಿ, ಪ್ರತಿದಿನ, ನಾವು ನಮ್ಮ ಕೆಲಸದ ಸ್ಥಳಕ್ಕೆ ಹೋಗುವಾಗ, ನಮ್ಮ ಕೆಲಸ, ನಮ್ಮ ಕೆಲಸದ ಸ್ಥಳ, ಮತ್ತು ನಮ್ಮ ಕೆಲಸದ ಜೀವಿತದ ಮೇಲೆ ಪ್ರಭಾವ ಬೀರುವಂತೆ ಶಿಲುಬೆಯ ವಿಮೋಚನಾ ಶಕ್ತಿಯನ್ನು ನಂಬಬೇಕು.

All Peoples Church & World Outreach
319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org